ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜೂನ್ 09, 2022

ಸಂಪುಟ : 49 ಸಂಚಿಕೆ : 26 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

## ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ: ಸತ್ಯಾಸತ್ಯತೆ ಪರಿಶೀಲಿಸಿ



ದಾವಣಗೆರೆ, ಜೂ.8- ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸುವಾಗ ಸತ್ಯಾಸತ್ಯತೆ ಪರಿಶೀಲಿಸುವ ಜೊತೆಗೆ ಕಾಯ್ದೆ ದುರುಪಯೋಗ ವಾಗದಂತೆ ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಬುಧವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ದೌರ್ಜನ್ಯ ತಡೆ ಕಾಯ್ದೆಯಡಿ ಪರಿಶಿಷ್ಟ ಸಮುದಾಯದವರಿಗೆ ನ್ಯಾಯ ಒದಗಿಸುವಲ್ಲಿ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲು ಆದ್ಯತೆ ನೀಡಬೇಕು. ಯಾವುದೇ ಕಾರಣಕ್ಕೂ ರಾಜೀ ಸಂಧಾನಗಳ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸದೆ, ಕರಾರುವಕ್ಕಾದ ತನಿಖೆ ನಡೆಸಿ ನೊಂದವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಕೆಲಸ ಮಾಡಬೇಕು ಎಂದು ತಿಳಿಸಿದರು

ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಕುಂದುವಾಡ ಮಂಜುನಾಥ್ ಮಾತನಾಡಿ, ಕಳೆದ ತಿಂಗಳು ದಾವಣಗೆರೆ ತಾಲ್ಲೂಕಿನ ಗ್ರಾಮದ ಯುವಕ, ಯುವತಿಯೊಬ್ಬರಿಗೆ ಮೆಸೇಜ್ ಮಾಡಿದ ಎನ್ನುವ ಕಾರಣಕ್ಕಾಗಿ ಆತನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿದೆ. ಯುವತಿಯ ಕಡೆಯವರು ಹುಡುಗನ ಮೇಲೆ ಸುಳ್ಳು ಆರೋಪವನ್ನು ಮಾಡಿ ಪ್ರಕರಣ ದಾಖಲಿಸಲಾಗಿದೆ. ಈ ಬಗ್ಗೆ ಪರಿಶೀಲನೆ ನಡೆಸಿ, ನ್ಯಾಯ ಒದಗಿಸಬೇಕೆಂದು ತಿಳಿಸಿದರು.

ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ, ಯುವಕನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ ನ್ಯಾಯ ಒದಗಿಸಲಾಗುವುದು ಹಾಗೂ ಎಸ್‌ಸಿಪಿ ಅನುದಾನ ದುರ್ಬಳಕೆ ಕುರಿತು ಸತ್ಯಾಸತ್ಯತೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

ಮತ್ತೋರ್ವ ನಾಮನಿರ್ದೇಶಿತ ಸದಸ್ಯ ಪಿ.ಎಂ ನಾಗರಾಜ್ ಮಾತನಾಡಿ, ಜೆ.ಹೆಚ್ ಪಟೇಲ್ ನಗರಕ್ಕೆ ಹಿಂದೆ ರಾತ್ರಿ ಸಮಯದಲ್ಲಿ ಗಸ್ತು ವಾಹನಗಳು ಬರುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಅವು ಸ್ಥಗಿತಗೊಂಡಿವೆ. ಜೊತೆಗೆ ಇಲ್ಲಿ (3ನೇ ಪುಟಕ್ಕೆ)

## ಸಾರ್ವಜನಿಕರ ಹಿತ ನಿಮ್ಮ ಕರ್ತವ್ಯ

### ಪೊಲೀಸರ ಮೇಲಿನ ಗೌರವ ಕಾಪಾಡಿಕೊಳ್ಳುವಂತೆ ಆರಗ ಜ್ಞಾನೇಂದ್ರ ಸಲಹೆ



ದಾವಣಗೆರೆ, ಜೂ.8- ಸಾರ್ವಜನಿಕರ ಹಿತರಕ್ಷಣೆ ನಿಮ್ಮ ಕರ್ತವ್ಯವೆಂದು ತಿಳಿದು ಕಾರ್ಯನಿರ್ವಹಿಸಿ ಎಂದು ಗೃಹ ಸಚಿವ ಅರಗ ಜ್ಞಾನೇಂದ್ರ ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಪೊಲೀಸ್ ಘಟಕದ ಪರಿವೀಕ್ಷಣಾ ಸಭೆಯಲ್ಲಿ ಅಧಿಕಾರಿಗಳನ್ನುದ್ದೇಶಿಸಿ ಅವರು ಮಾತನಾಡಿದರು.

ಸಾರ್ವಜನಿಕರಿಗೆ ಪೊಲೀಸ್ ಇಲಾಖೆ ಬಗ್ಗೆ ಗೌರವ ಇದ್ದು, ಅದನ್ನು ಕಾಪಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕು. ಪೊಲೀಸರೆಂದರೆ ಸಾರ್ವಜನಿಕರ ಹಿತೈಷಿಗಳೆಂಬ ಭಾವನೆ ಮೂಡಬೇಕು ಎಂದರು.

ಜಿಲ್ಲೆಯಲ್ಲಿ ಬೀಟ್ ವ್ಯವಸ್ಥೆಯನ್ನು ಬಲಪಡಿಸಿ. ಬೀಟ್ ಪೊಲೀಸರಿಗೆ ಅವರ ಏರಿಯಾದ ಎಲ್ಲಾ ಮಾಹಿತಿ ಇರಬೇಕು. ಕೇವಲ ಬೀಟ್ ಇದೆ ಎಂದು ಆ ಪ್ರದೇಶಗಳಿಗೆ ಹೋಗಿ ಬರುವುದಲ್ಲ, ಅಲ್ಲಿ ನಡೆಯುವ ಪ್ರತಿ ಚಟುವಟಿಕೆ ನಿಮ್ಮ ಅರಿವಿಗಿರಬೇಕು ಹಾಗೂ ಏನಾದರು ವಿಷಯಗಳಿದ್ದರೆ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು ಎಂದರು.

ರಾಜ್ಯದ ನಗರಗಳ ಕೆಲ ಭಾಗಗಳಲ್ಲಿ ವಿದೇಶಿ ಸಂಪರ್ಕದ ವ್ಯಕ್ತಿಗಳು ಈ ದೇಶದ ಏಕತೆ ಹಾಳು ಮಾಡಲು ಸಂಚು ರೂಪಿಸುತ್ತಿರುವ ಘಟನೆಗಳು ಜರುಗುತ್ತಿವೆ. ಆದ್ದರಿಂದ ನಿಮ್ಮ ಠಾಣಾ ವ್ಯಾಪ್ತಿಯ ಸಮಗ್ರ ಚಿತ್ರಣ ನಿಮಗಿರಬೇಕು. ನಿಮ್ಮ ಏರಿಯಾಗೆ ಬಂದಿರುವ ಹೊಸ ವ್ಯಕ್ತಿಗಳು ಅವರ ಚಲನವಲನ, ಅವರ ಪೂರ್ವಾಪರಗಳ ಮಾಹಿತಿ ನಿಮ್ಮಲ್ಲಿದ್ದರೆ ಅಹಿತಕರ ಘಟನೆಗಳನ್ನು ತಪ್ಪಿಸಬಹುದು ಎಂದರು.

ಕೆಲ ಏರಿಯಾಗಳಿಗೆ ಪೊಲೀಸರೇ ಹೋಗಲು ಹಿಂದು ಮುಂದು ನೋಡುತ್ತಾರೆ. ಸೂಕ್ಷ್ಮ ಪ್ರದೇಶಗಳೆಂಬ ಸಬೂಬು ಹೇಳುತ್ತಾರೆ. ಸೂಕ್ಷ್ಮ ಪ್ರದೇಶಗಳಿಗೆ ಹೋಗಬಾರದು ಅನ್ನುವುದಕ್ಕಿಂತ ನಾವಿದ್ದೇವೆ ಅಲ್ಲಿಗೆ ಹೋಗಿ ಎಂದು ಧೈರ್ಯ ತುಂಬಬೇಕು. ಪೊಲೀಸರೇ ಹೀಗಾದರೆ ದೇಶದ ಶಾಂತಿ, ಸುವ್ಯವಸ್ಥೆ ಕಾಪಾಡುವವರು ಯಾರು? ವಿಘಟನಕಾರಿ ಶಕ್ತಿಗಳನ್ನುಎಡೆಮುರಿ ಕಟ್ಟುವುದು ಪೊಲೀಸರ ಧ್ಯೇಯವಾಗಬೇಕೆಂದರು.

ಪ್ರಾರ್ಥನಾ ಮಂದಿರಗಳಲ್ಲಿ ಅನುಮತಿಗಿಂತ ಹೆಚ್ಚು ಡೆಸಿಬಲ್ ಹಾಗೂ ನಿಗದಿತ ಸಮಯ ಮೀರಿ ಧ್ವನಿವರ್ಧಕ ಬಳಸಿದವರ ಮೇಲೆ ಮುಲಾಜಿಲ್ಲದೆ ಪ್ರಕರಣ ದಾಖಲಿಸಿ. ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವುದು ಎಲ್ಲರ ಕರ್ತವ್ಯ. ಪೊಲೀಸ್ ಇಲಾಖೆ ನ್ಯಾಯಾಲಯದ ಆಜ್ಞೆಯನ್ನು ಕಟ್ಟುನಿಟ್ಟಿನ ಜಾರಿಗೆ ಕಾರ್ಯನಿರ್ವಹಿಸಬೇಕೆಂದರು. ಅನಧಿಕೃತ ಕಸಾಯಿಖಾನೆಗಳು ಹಾಗೂ ಅಕ್ರಮ ಗೋ ಸಾಗಾಣಿಕೆಯನ್ನು ಸರ್ಕಾರ ಸಹಿಸುವುದಿಲ್ಲ. ಎಲ್ಲೇ ಅಕ್ರಮ ಗೋ ಸಾಗಾಣಿಕೆ ಕಂಡುಬಂದರೆ ತಕ್ಷಣ ಸ್ಪಂದಿಸಿ, ಗೋವುಗಳು ಕಟುಕರ ಪಾಲಾಗುವುದನ್ನು ತಪ್ಪಿಸಿ. ಅಕ್ರಮ (2ನೇ ಪುಟಕ್ಕೆ)

> **ಜಿಲ್ಲೆಯ ಹಲವು ಕಡೆ ಜೂಜು, ಮಟ್ಕಾ ಎಗ್ಗಿಲ್ಲದೆ ನಡೆಯುತ್ತಿವೆ ಎಂದು ಸಾರ್ವಜನಿಕರು ದೂರು ನೀಡಿದ್ದು, ತಕ್ಷಣವೇ ಇಂತಹ ಚಟುವಟಿಕೆಗಳು ನಿಲ್ಲಬೇಕು. ಇಲ್ಲದಿದ್ದರೆ ಆ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.**
>
> **ಪ್ರಾರ್ಥನಾ ಮಂದಿರಗಳಲ್ಲಿ ಅನುಮತಿಗಿಂತ ಹೆಚ್ಚು ಡೆಸಿಬಲ್ ಹಾಗೂ ನಿಗದಿತ ಸಮಯ ಮೀರಿ ಧ್ವನಿವರ್ಧಕ ಬಳಸಿದವರ ಮೇಲೆ ಮುಲಾಜಿಲ್ಲದೆ ಪ್ರಕರಣ ದಾಖಲಿಸಿ.**
>
> **- ಅರಗ ಜ್ಞಾನೇಂದ್ರ, ಗೃಹ ಸಚಿವ**

## ಶಿಕ್ಷಣ ಸಚಿವರ ಮನೆಗೆ ನುಗ್ಗಿ ಪ್ರತಿಭಟನೆ: ಕಾನೂನು ಕ್ರಮ

ದಾವಣಗೆರೆ, ಜೂ.8- ಶಿಕ್ಷಣ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ಯಾರೂ ಅನುಮತಿ ಪಡ'ದಿಲ್ಲ. ಪ್ರತಿಭಟನಕಾರರು ಸಚಿವರ ಮನೆಗೆ ನುಗ್ಗಿ ಚಡ್ಡಿ ತಂದು ಸುಟ್ಟುಹಾಕಿದ್ದಾರೆ. ಅವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶಿಕ್ಷಣ ಸಚಿವರ ಮನೆಗೆ ನುಗ್ಗಿ ಗಲಾಟೆ ಮಾಡಿದ ಬಹುತೇಕರು ವಿದ್ಯಾರ್ಥಿಗಳಲ್ಲ. ಅದರಲ್ಲಿ ದಾವಣಗೆರೆಯ ಮೂವರಿದ್ದಾರೆ. ನಾವೂ ಸಹ ಹೋರಾಟ ಮಾಡಿಯೇ ಬಂದವರು. ಆದರೆ ಮನೆಗೆ ನುಗ್ಗುವುದು ಸರಿಯಲ್ಲ. ಹೋರಾಟ ಪ್ರಜಾಪ್ರಭುತ್ವ ಮಾದರಿಯಲ್ಲಿರಬೇಕು ಎಂದರು.

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸಮರ್ಪಕವಾಗಿದೆ ಎಂದು ಶ್ಲಾಘಿಸಿದ ಸಚಿವರು, ಚಿಕ್ಕ ಪುಟ್ಟ ಘಟನೆ ಬಿಟ್ಟರೆ ಜಿಲ್ಲೆ ಶಾಂತವಾಗಿದೆ. ಹಿಜಾಬ್ ಪ್ರಕರಣ ಸೇರಿದಂತೆ ಕೆಲ ವಿವಾದಗಳನ್ನು ಪೊಲೀಸರು ಉತ್ತಮವಾಗಿ ನಿಭಾಯಿಸಿದ್ದಾರೆ ಎಂದರು. ಹಿಜಾಬ್ ಕುರಿತು ಮಾತನಾಡಿದ ಅವರು, (3ನೇ ಪುಟಕ್ಕೆ)

## ಸಾಲದ ಮೇಲಿನ ಬಡ್ಡಿ ದರ ಮತ್ತಷ್ಟು ದುಬಾರಿ

ಮುಂಬೈ, ಜೂ.8 - ಕಳೆದ ಕೆಲ ವಾರಗಳ ಹಿಂದಷ್ಟೇ ರೆಪೋ ದರ ಏರಿಕೆ ಮಾಡಿದ್ದ ಭಾರತೀಯ ರಿಸರ್ವ್ ಬ್ಯಾಂಕ್ ಇದೀಗ ದಿಢೀರನೆ ಮತ್ತೊಮ್ಮೆ ರೆಪೋ ದರದಲ್ಲಿ ಏರಿಕೆ ಮಾಡಿದೆ. ಹೀಗಾಗಿ, ವಿವಿಧ ಇಎಂಐ, ಸಾಲದ ಮೇಲಿನ ಬಡ್ಡಿ ದರ ಮತ್ತಷ್ಟು ದುಬಾರಿಯಾಗಲಿವೆ. 40 ಬೇಸಿಸ್ ಪಾಯಿಂಟ್ಸ್ ಗಳೊಂದಿಗೆ ರೆಪೋ ದರ ಶೇ. 4.90ಕ್ಕೆ ಹೆಚ್ಚಳ ಮಾಡಲಾಗಿದೆ.

ರೆಪೋ ದರ ಇದೀಗ 4.4 ರಿಂದ 4.9ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಹೆಚ್ಚುತ್ತಿರುವ ಹಣದುಬ್ಬರ ನಿಯಂತ್ರಿಸುವ ನಿಟ್ಟಿನಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಳೆದ ಕೆಲ ದಿನಗಳ ಹಿಂದೆ ತಕ್ಷಣವೇ ಜಾರಿಗೆ ಬರುವಂತೆ 40 ಬೇಸಿಸ್ ಪಾಯಿಂಟ್ಸ್‌ಗಳೊಂದಿಗೆ ರೆಪೋ ದರ ಶೇ. 4.40ಕ್ಕೆ ಏರಿಕೆ ಮಾಡಿತ್ತು.

ರೆಪೋ ದರ ಏರಿಕೆ ಮಾಡಿರುವ ಕಾರಣ ಇದೀಗ ಸಾಲದ ಮೇಲಿನ ಬಡ್ಡಿದರ ಹೆಚ್ಚಳವಾಗಲಿದ್ದು, ಗೃಹ, ವಾಹನ ಸಾಲದ ಇಎಂಐ ಹೊರೆ ಏರಿಕೆಯಾಗಲಿದೆ. ಎರಡು ವರ್ಷಗಳ ಬಳಿಕ ಇದೇ ಮೊದಲ ಸಲ ರೆಪೋ ದರ ಸತತವಾಗಿ ಎರಡು ಸಲ ಏರಿಕೆ ಮಾಡಲಾಗಿದ್ದು, ಮುಖ್ಯವಾಗಿ ಇಎಂಐ ಕಟ್ಟುವವರಿಗೆ ಹೆಚ್ಚಿನ ಹೊರೆಯಾಗಲಿದೆ.

## ಕೌನ್ಸೆಲಿಂಗ್ ನಂತರವೂ ಪಿ.ಜಿ. ಸೀಟುಗಳು ಖಾಲಿ

ನವದೆಹಲಿ, ಜೂ. 8 – ನೀಟ್ - ಪಿಜಿ - 21 ನಲ್ಲಿ 1,456 ಸೀಟುಗಳನ್ನು ಖಾಲಿ ಉಳಿಸಿರುವ ಎಂ.ಸಿ.ಸಿ. (ಮೆಡಿಕಲ್ ಕೌನ್ಸೆಲಿಂಗ್ ಕಮಿಟಿ) ಅನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ಇದರಿಂದಾಗಿ ಆಕಾಂಕ್ಷಿಗಳು ಕಷ್ಟ ಎದುರಿಸುವುದಷ್ಟೇ ಅಲ್ಲದೇ, ವೈದ್ಯರ ಕೊರತೆಯಾಗಲಿದೆ ಎಂದು ಹೇಳಿದೆ.

ಖಾಲಿ ಇರುವ ಸೀಟುಗಳು ಹಾಗೂ ಅವುಗಳನ್ನು ತುಂಬದೇ (3ನೇ ಪುಟಕ್ಕೆ)

## ಭತ್ತದ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ



ನವದೆಹಲಿ, ಜೂ. 8 – ಕೇಂದ್ರ ಸರ್ಕಾರ ಮುಂಗಾರು ಬೆಳೆಗಳ ಬೆಂಬಲ ಬೆಲೆಯನ್ನು ಶೇ.4-9ರಷ್ಟು ಹೆಚ್ಚಿಸಿದೆ. 2022-23ರ ಸಾಲಿಗಾಗಿ ಈ ಹೆಚ್ಚಳ ಮಾಡಲಾಗಿದ್ದು, ಭತ್ತದ ಬೆಂಬಲ ಬೆಲೆಯನ್ನು 100 ರೂ. ಗಳಷ್ಟು ಹೆಚ್ಚಿಸಿ ಕ್ವಿಂಟಾಲ್‌ಗೆ 2,040 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಇದರಿಂದ ರೈತರು ಭತ್ತ ಬೆಳೆಯಲು ಹೆಚ್ಚಿನ ಉತ್ತೇಜನ ಸಿಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ 14 ಮುಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಿಸಲಾಗಿದೆ.

ಕ್ವಿಂಟಾಲ್‌ಗೆ 92 ರೂ.ಗಳಿಂದ 523 ರೂ.ಗಳವರೆಗೆ ಬೆಂಬಲ ಬೆಲೆ ಹೆಚ್ಚಿಸಲಾಗಿದೆ. ರೈತರು ಉತ್ಪಾದನಾ ವೆಚ್ಚದ ಶೇ.50 ರಿಂದ 85ರಷ್ಟು ಲಾಭ ಪಡೆಯಲು ಸಾಧ್ಯವಾಗಲಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

ಎಳ್ಳಿನ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲ್‌ಗೆ 523 ರೂ.ಗಳಷ್ಟು ಹೆಚ್ಚಿಸಲಾಗಿದೆ. ಮೆಕ್ಕೆಜೋಳಕ್ಕೆ ಅತಿ ಕಡಿಮೆ (2ನೇ ಪುಟಕ್ಕೆ)

## ಬುದ್ದಿವಂತರಿಗಿಂತ ಪ್ರಜ್ಞಾವಂತರು ಶ್ರೇಷ್ಠ



**ಬಿ.ಜೆ. ಅಜಯ್ ಕುಮಾರ್ ಅಭಿನಂದನಾ ಸಮಾರಂಭದಲ್ಲಿ ಬಸವ ಪ್ರಭು ಸ್ವಾಮೀಜಿ**

ದಾವಣಗೆರೆ, ಜೂ.8- ಜಗತ್ತಿನಲ್ಲಿ ಬುದ್ಧಿವಂತರು, ವಿದ್ಯಾವಂತರು, ಹಣವಂತರು, ಛಲವಂತರು, ರೂಪವಂತರು, ಕುಲವಂತರು, ಆಚಾರವಂತರು, ಪಿತೂರಿ ವಂತರು ಸುಲಭವಾಗಿ ಸಿಗುತ್ತಾರೆ. ಆದರೆ ಹೃದಯವಂತರು, ಗುಣವಂತರು ಸಿಗುವುದು ವಿರಳ. ವಿದ್ಯಾವಂತರಿಗಿಂತ ಬುದ್ದಿವಂತರು ಉತ್ತಮ. ಬುದ್ದಿವಂತರಿಗಿಂತ ಪ್ರಜ್ಞಾವಂತರು ಶ್ರೇಷ್ಠ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಿಶ್ಲೇಷಿಸಿದರು.

ಬಸವ ಕೇಂದ್ರ ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶಿವಯೋಗಾಶ್ರಮ ಟ್ರಸ್ಟ್ ಇವರ ವತಿಯಿಂದ ಬಸವ ಜಯಂತ್ಯೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ ಸ್ವಾಗತ ಸಮಿತಿ ಅಧ್ಯಕ್ಷ ಬಿ.ಜೆ. ಅಜಯ್ ಕುಮಾರ್ ಅವರಿಗೆ ಏರ್ಪಡಿಸಿದ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ವಿದ್ಯಾವಂತರ ಜ್ಞಾನ ಸೀಮಿತ, ಬುದ್ದಿವಂತರ ವಿವೇಕ ಸ್ಪಷ್ಟ, ಪ್ರಜ್ಞಾವಂತರ ಅರಿವು ವಿಶಾಲ ಹಾಗೂ ಆಳ. ವಿದ್ಯಾವಂತರು ತಮ್ಮ (2ನೇ ಪುಟಕ್ಕೆ)

## ಕ್ರೆಡಿಟ್ ಕಾರ್ಡುಗಳು ಯುಪಿಐ ಬಳಸಲು ಅನುಮತಿ

ಮುಂಬೈ, ಜೂ. 8 – ಕ್ರೆಡಿಟ್ ಕಾರ್ಡುಗಳನ್ನು ಯು.ಪಿ.ಐ. (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಜೊತೆ ಜೋಡಣೆ ಮಾಡಲು ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ. ಇದರಿಂದಾಗಿ ಜನರು ಪಾವತಿ ಮಾಡಲು ಅನುಕೂಲವಾಗಲಿದೆ.

ಇದುವರೆಗೂ ಉಳಿತಾಯ ಖಾತೆಗಳು ಹಾಗೂ ಚಾಲ್ತಿ ಖಾತೆಗಳ ಜೊತೆ ಜೋಡಣೆ ಮಾಡಲಾದ ಡೆಬಿಟ್ ಕಾರ್ಡುಗಳು ಮಾತ್ರ ಯು.ಪಿ.ಐ. ಜೊತೆ ಸಂಪರ್ಕ ಹೊಂದಲು (3ನೇ ಪುಟಕ್ಕೆ)

## ಹರಪನಹಳ್ಳಿ ಪುರಸಭೆ ಪ್ರಭಾರಿ ಅಧ್ಯಕ್ಷರಾಗಿ ನಿಟ್ಟೂರು ಭೀಮವ್ವ



ಹರಪನಹಳ್ಳಿ, ಜೂ. 8 - ಸ್ಥಳೀಯ ಪುರಸಭೆ ಪ್ರಭಾರಿ ಅಧ್ಯಕ್ಷರಾಗಿ ನಿಟ್ಟೂರು ಭೀಮವ್ವ ಸಣ್ಣ ಹಾಲಪ್ಪ ಪುರಸಭೆ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಬುಧವಾರ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಮಂಜುನಾಥ ಇಜಂತಕರ್ ತಮ್ಮ ವೈಯಕ್ತಿಕ ಕಾರಣಗಳಿಂದ ರಾಜೀನಾಮೆ ಸಲ್ಲಿಸಿದ್ದರು, ರಾಜೀನಾಮೆ ಅಂಗೀಕಾರ ಹಿನ್ನೆಲೆಯಲ್ಲಿ, ಪ್ರಭಾರಿ ಅಧ್ಯಕ್ಷರಾಗಿ, ಪುರಸಭೆ ಉಪಾಧ್ಯಕ್ಷರಾಗಿದ್ದ ಭೀಮವ್ವನವರಿಗೆ ನಿರ್ಗಮಿತ ಅಧ್ಯಕ್ಷರು ಅಧಿಕಾರ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಎಂ.ವಿ.ಅಂಜಿನಪ್ಪ ಮಾತನಾಡಿ, ಮಂಜುನಾಥ ಇಜಂತಕರ್‌ರವರು ಪ್ರಸ್ತುತ ಸಂಘರ್ಷದ ರಾಜಕಾರಣದಲ್ಲಿ ಎಲ್ಲವನ್ನು ಮೀರಿ, ಹದಿನೆಂಟು ತಿಂಗಳು ಅಧ್ಯಕ್ಷರಾಗಿ ಉತ್ತಮ ಆಡಳಿತ ಮಾಡಿದ್ದಾರೆ. ಅಲ್ಲದೆ ಸಾರ್ವಜನಿಕರಿಗೆ ಹತ್ತಿರವಾಗುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. (2ನೇ ಪುಟಕ್ಕೆ)

## ವರಿಷ್ಠರು ಸೂಚಿಸುವ ಅಭ್ಯರ್ಥಿಯೇ ಸಿಎಂ

### ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಒಮ್ಮತದ ನಿಲುವು



ಬೆಂಗಳೂರು, ಜೂ. 8- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರದ ಚುಕ್ಕಾಣೆ ಹಿಡಿದರೆ, ವರಿಷ್ಠರು ಸೂಚಿಸುವ ಅಭ್ಯರ್ಥಿಯೇ ಮುಖ್ಯಮಂತ್ರಿಯಾಗಲಿ ಎಂಬ ನಿರ್ಧಾರಕ್ಕೆ ವಿಧಾನಸಭಾ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒಮ್ಮತದ ನಿಲುವು ತೆಗೆದುಕೊಂಡಿದ್ದಾರೆ.

ಉಭಯ ನಾಯಕರಲ್ಲಿನ ಭಿನ್ನಾಭಿಪ್ರಾಯದಿಂದ ರೋಸಿ ಹೋಗಿದ್ದ, ಮುಂದಿನ ಸಾಲಿನ ಮುಖಂಡರು ಕಳೆದ ವಾರ ನಗರದ ಪ್ರತಿಷ್ಠಿತ ಕ್ಲಬ್‌ವೊಂದರಲ್ಲಿ ಇವರ ಜೊತೆ ಮಾತುಕತೆ ನಡೆಸಿದ ನಂತರ ಈ ತೀರ್ಮಾನಕ್ಕೆ ಬಂದಿದ್ದಾರೆ.

ದೇವನಹಳ್ಳಿಯಲ್ಲಿ ನಡೆದ ಚಿಂತನ-ಮಂಥನ ಸಭೆಯಲ್ಲಿ ಉಭಯ ನಾಯಕರನ್ನು ಕೂರಿಸಿ, ಮಾತುಕತೆ ಸಂಧಾನ ನಡೆದಿದ್ದರೂ ಪೂರ್ಣ ಪ್ರಮಾಣದಲ್ಲಿ ಫಲಪ್ರದವಾಗಿರಲಿಲ್ಲ. ಅದಾದ ನಂತರ ಹಿರಿಯ ನಾಯಕರಾದ ದಿನೇಶ್ ಗುಂಡೂರಾವ್, ಕೃಷ್ಣ ಭೈರೇಗೌಡ, (2ನೇ ಪುಟಕ್ಕೆ)

## ಕೊಟ್ಟೂರು ಅಭಿವೃದ್ದಿಗೆ 60 ಕೋಟಿ

**ಪಟ್ಟಣ ಪಂಚಾಯ್ತಿ ನೂತನ ಕಟ್ಟಡ ಉದ್ಘಾಟಿಸಿದ ಶಾಸಕ ಎಸ್.ಭೀಮಾನಾಯ್ಕ**

ಕೊಟ್ಟೂರು, ಜೂ.8- ಪಟ್ಟಣ ಮತ್ತು ತಾಲ್ಲೂಕಿನ ಸಮಗ್ರ ಅಭಿವೃದ್ದಿಗೆ ಮತ್ತೆ 60 ಕೋಟಿ . ಅನುದಾನವನ್ನು ಮೀಸಲಿರಿಸುವ ಕ್ರಿಯಾ ಯೋಜನೆ ರೂಪಿಸಲಾಗಿದ್ದು, ಒಟ್ಟು 100 ಕೋಟಿ ರೂ. ವ್ಯಯಿಸಿ ತಾಲ್ಲೂಕನ್ನು ಅಭಿವೃದ್ದಿ ಪಥದತ್ತ ಕೊಂಡೊಯ್ಯಲಾಗಿದೆ. 5 ಕೋಟಿ ರೂ. ವೆಚ್ಚದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ ಮಾಡುವಂತೆ ಈಗಾಗಲೇ ಸಾರಿಗೆ ಅಧಿಕಾರಿಗಳಿಗೆ ಸೂಚಿಸಿ ಈ ಸಂಬಂಧದ ಅನುದಾನವನ್ನು ಸಹ ನೀಡಲು ಮುಂದಾಗಿರುವುದಾಗಿ ಶಾಸಕ ಎಸ್.ಭೀಮಾನಾಯ್ಕ ಹೇಳಿದರು.

ಬುಧವಾರ 13ನೇ ಹಣಕಾಸು ಯೋಜನೆ ಮತ್ತು ಎಸ್.ಎಫ್.ಸಿ ಅನುದಾನಡಿಯಲ್ಲಿ ನಿರ್ಮಿತಿ ಕೇಂದ್ರದ ಹೊಣೆಗಾರಿಕೆಯೊಂದಿಗೆ ನಿರ್ಮಾಣಗೊಂಡ ಕೊಟ್ಟೂರು ಪಟ್ಟಣ ಪಂಚಾಯಿತಿ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಶಾಸಕ ಎಂಬ ಕಾರಣಕ್ಕಾಗಿ ಕ್ಷೇತ್ರದ ಅಭಿವೃದ್ದಿಗೆ ಅನುದಾನ ನೀಡಲು ತಾರತಮ್ಯ ಎಸಗುತ್ತಿರುವ ಬಿಜೆಪಿ ಸರ್ಕಾರದ ಅಸಹಕಾರದ ನಡುವೆಯೂ ತಾಲೂಕಿನಲ್ಲಿ ಭರಪೂರ ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳಬೇಕೆಂಬ ಇಚ್ಚೆ ವ್ಯಕ್ತಪಡಿಸಿ ಕಾಮಗಾರಿಗಳ ಉದ್ಘಾಟನಾ ಸಮಾರಂಭ ನಡೆಸಲು ಮುಂದಾದರೆ, ಮಾಜಿ ಶಾಸಕ ಕೆ.ನೇಮಿರಾಜ್ ನಾಯ್ಕ ಇಲ್ಲಿನ ಅಧಿಕಾರಿಗೆ ದೂರವಾಣಿ ಮೂಲಕ ಧಮಕಿ ಹಾಕಿ ಉದ್ಘಾಟನಾ ಸಮಾರಂಭ ನಡೆಯದಂತೆ ಮಾಡುತ್ತೇನೆ ಎಂದು ಸಣ್ಣತನ ಪ್ರದರ್ಶಿಸಿದ್ದಾರೆ ಎಂದು ಟೀಕಿಸಿದರು.

ಡಿಸೆಂಬರ್ ಒಳಗೆ ಕೊಳಚೆ ನಿರ್ಮೂಲನಾ ಮಂಡಳಿಯ 411 ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಂಡು ಫಲಾನುಭವಿಗಳಿಗೆ ನೀಡಲು ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಗರೋತ್ಥಾನದ ಅನುದಾನದಲ್ಲಿ ಫಲಾನುಭವಿಗಳಿಗೆ ತಲಾ 10 ಸಾವಿರ ರೂ. ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಹೇಳಿದರು.

2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ (2ನೇ ಪುಟಕ್ಕೆ)

## ಸಾಲಕಟ್ಟೆ ಶ್ರೀ ಬಣಕಾರ್ ಹಾಲೇಶಪ್ಪ ನಿಧನ



ಹಿರಿಯ ಜೀವಿ, ಅಧ್ಯಾತ್ಮಿಕ ಚಿಂತಕರು, ಹರಿಹರ ತಾಲ್ಲೂಕು ಸಾಲಕಟ್ಟೆ ಗ್ರಾಮದ (ಅಮರಾವತಿ ಕಾಲೋನಿ ವಾಸಿ )

**ಶ್ರೀ ಬಣಕಾರ್ ಹಾಲೇಶಪ್ಪ ಸಾಲಕಟ್ಟೆ**

ಇವರು ದಿನಾಂಕ 8.06.2022ರ ಬುಧವಾರ ಸಂಜೆ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 9.06.2022ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಸಾಲಕಟ್ಟೆಯ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು: ಶ್ರೀಮತಿ ಲಲಿತಮ್ಮ ಬಣಕಾರ್ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಣಕಾರ್ ಸಹೋದರರು ಮತ್ತು ಬಂಧು ಮಿತ್ರರು.

dbson ಡಿಬಿಸನ್
MANUFACTURERS OF ELECTRICAL CONTROL PANELS SINCE 1983
Electrical Switchgear Training
@ BAPUJI POLYTECHNIC
Shamanur Road, Davangere.
Date : 9, 10 & 11th June 2022
#22, Sathyamangala
Industrial Area, Tumkur-4.
97435 34933, 98440 51072
upc@dbson.net - www.dbson.in



# ಅಂತರರಾಷ್ಟ್ರೀಯ ಕುಸ್ತಿಯಲ್ಲಿ ಚಿನ್ನದ ಪದಕ : ಕುರಿಗಾಹಿ ಮಗನ ಸಾಧನೆ

## ಹರಪನಹಳ್ಳಿ ತಾಲ್ಲೂಕು ಕುರುಬ ಸಮಾಜದ ಕಾರ್ಯಕ್ರಮದಲ್ಲಿ ಗಣ್ಯರ ಮೆಚ್ಚುಗೆ



ಹರಪನಹಳ್ಳಿ, ಜೂ.8- ಒಬ್ಬ ಬಡ ಕುರಿಗಾಹಿ ಮಗ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ್ದಾನೆಂದರೆ ಅದು ದೊಡ್ಡ ಸಾಧನೆ ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಹೆಚ್.ಬಿ.ಪರಶುರಾಮಪ್ಪ ಹೇಳಿದರು.

ಥೈಲ್ಯಾಂಡಿನಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿರುವ ತಾಲ್ಲೂಕಿನ ಹಲುವಾಗಲು ಗ್ರಾಮದ ಯುವ ಪ್ರತಿಭೆ ದನಕಾವರ್ ಮಲ್ಲಿಕಾರ್ಜುನ್ ಅವರಿಗೆ ತಾಲ್ಲೂಕು ಕುರುಬ ಸಮಾಜ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಲ್ಲಿಕಾರ್ಜುನ್ ಕ್ರೀಡೆಯಲ್ಲಿ ಮಾಡಿರುವ ಸಾಧನೆ ಬರೀ ನಮ್ಮ ಸಮಾಜ, ತಾಲ್ಲೂಕಿಗೆ ಅಷ್ಟೇ ಅಲ್ಲ, ಇಡೀ ಭಾರತವೇ ಹೆಮ್ಮೆ ಪಡುವಂತಹ ಸಾಧನೆಯಾಗಿದ್ದು, ಕ್ರೀಡೆಯ ಜೊತೆ ಜೊತೆಗೆ ಶಿಕ್ಷಣವನ್ನೂ ಮುಂದುವರೆಸಿ ಕ್ರೀಡಾ ಮೀಸಲಾತಿ ಸೌಲಭ್ಯದಡಿಯಲ್ಲಿ ಸರ್ಕಾರಿ ಹುದ್ದೆ ಪಡೆದುಕೊಳ್ಳಲಿ ಎಂದು ಮಲ್ಲಿಕಾರ್ಜುನ್‌ರವರಿಗೆ ಶುಭ ಹಾರೈಸಿದರು.

ಮಾಜಿ ಅಧ್ಯಕ್ಷ ವೈ.ಕೆ.ಬಿ.ದುರುಗಪ್ಪ ಮಾತನಾಡಿ, ದನಕಾವರ್ ಮಲ್ಲಿಕಾರ್ಜುನ್ ಅವರು ಗ್ರಾಮೀಣ ಪ್ರದೇಶದ ಬಡ ಕುಟುಂಬದಲ್ಲಿ ಹುಟ್ಟಿ ಕುಸ್ತಿ ಸ್ಪರ್ಧೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಗಳಿಸಿರು ವುದು ತಾಲ್ಲೂಕು ಕುರುಬ ಸಮಾಜ ಹೆಮ್ಮೆ ಪಡುವಂತಹ ಕೆಲಸವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಯುವ ಕುಸ್ತಿಪಟು ಮಲ್ಲಿಕಾರ್ಜುನ್, ಇದೀಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಚಿನ್ನ ಗೆದ್ದಿದ್ದೇನೆ ತುಂಬಾ ಸಂತೋಷ ವಾಗಿದೆ, ಮುಂದೆ ಏಷ್ಯನ್ ಸಬ್ ಗೇಮ್ಸ್‌ನಲ್ಲಿ ಆಡುವ ಆಸೆ ಇದೆ ನಿಮ್ಮೆಲ್ಲರ ಪ್ರೀತಿ, ಸಹಕಾರ ಇರಲಿ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಮಾಜದ ಅಧ್ಯಕ್ಷ ವಕೀಲ ಆರ್. ಗೋಣಿಬಸಪ್ಪ ಮಾತನಾಡಿ, ಯುವಕರು ದುಶ್ಚಟಗಳಿಂದ ದೂರವಿದ್ದು, ಸಮಾಜ ಗೌರವಿಸುವಂತಹ ಸಾಧನೆ ಮಾಡಬೇಕು, ಈ ನಿಟ್ಟಿನಲ್ಲಿ ಭಾರತಕ್ಕೆ ಕೀರ್ತಿ ತಂದಿರುವ ಮಲ್ಲಿಕಾರ್ಜುನ್ ಅವರ ಸಾಧನೆ ಹೆಮ್ಮೆಪಡುವಂತಾಗಿದ್ದು, ಇವರು ಕ್ರೀಡೆಯಲ್ಲಿ ಇನ್ನು ಹೆಚ್ಚು ಸಾಧನೆ ಮಾಡುವಂತಾಗಲಿ. ಸಮಾಜ ಇವರಿಗೆ ಎಲ್ಲಾ ರೀತಿಯ ಸಹಾಯ, ಸಹಕಾರ ನೀಡಲಿದೆ ಎಂದು ತಿಳಿಸಿದರು.

ಸಮಾಜದ ಗೌರವಾಧ್ಯಕ್ಷ ಕಲ್ಲೇರ್ ಬಸವರಾಜಪ್ಪ, ಉಪಾಧ್ಯಕ್ಷ ಎಚ್.ವಸಂತಪ್ಪ, ಯಡಿಹಳ್ಳಿ ಪಾಲಾಕ್ಷಪ್ಪ, ಮುತ್ತಿಗಿ ಸಾಬಳ್ಳಿ ಜಂಬಣ್ಣ, ಕಾರ್ಯದರ್ಶಿ ಬಳಿಗಾನೂರು ಪರಶುರಾಮ್, ಮುಖಂಡ ಅಲಮರಸಿಕೇರಿ ಪರಶುರಾಮ್, ಪುರಸಭೆ ಸದಸ್ಯರಾದ ಭರತೇಶ್, ಗಣೇಶ್, ಕೆಂಚಪ್ಪ, ರಾಗಿಮಸಲವಾಡದ ಶಂಭುಲಿಂಗಪ್ಪ, ದಾದಾಪುರ ಶಿವಪುತ್ರ, ಮಜ್ಜಿಗೇರಿ ಮಲ್ಲಿಕಾರ್ಜುನ್ ಮೇಘರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೆರೆಗಳಿಗೆ ನದಿ ನೀರು ತುಂಬಿಸುವ ಕಾಮಗಾರಿ ಪುನರಾರಂಭ ಮಾಡಲು ಆಗ್ರಹ

## ಹರಪನಹಳ್ಳಿ : ಪ್ರಗತಿಪರ ರೈತ ಸಂಘಟನೆ ಒಕ್ಕೂಟದಿಂದ ಪ್ರತಿಭಟನಾ ಮೆರವಣಿಗೆ



ಹರಪನಹಳ್ಳಿ, ಜೂ 8 - ನೆನೆಗುದಿಗೆ ಬಿದ್ದಿರುವ ಹರಪನಹಳ್ಳಿ ತಾಲ್ಲೂಕಿನ ಕೆರೆಗಳಿಗೆ ನದಿ ನೀರು ತುಂಬಿಸುವ ಕಾಮಗಾರಿ ಪುನರಾರಂಭ ಮಾಡಿ ಬೇಗ ಯೋಜನೆ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿ ಪ್ರಗತಿಪರ ರೈತ ಸಂಘಟನೆಯ ಒಕ್ಕೂಟದ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ.ವೀಣಾ ಮಹಾಂತೇಶ್ ಮಾತನಾಡಿ, 60 ಕೆರೆಗಳಿಗೆ ತುಂಗಭದ್ರಾ ನದಿ ನೀರು ತುಂಬಿಸುವ 200 ಕೋಟಿ ರೂ. ಗಳ ವೆಚ್ಚದ ಕಾಮಗಾರಿಯ ಬಹಳಷ್ಟು ಕೆಲಸ ಮುಗಿದು ನಂತರ ಸ್ಥಗಿತಗೊಂಡಿದೆ. ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜು ಕಾಮಗಾರಿ ಸಹ ಸ್ಥಗಿತ ಗೊಂಡಿದೆ ಈ ಎರಡೂ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ, ಜನ ಪ್ರತಿ ನಿಧಿಗಳಿಗೆ ಮನವಿ ಮಾಡಿ ದರೂ ನಿರ್ಲಕ್ಷ್ಯ ತೋರಲಾ ಗಿದೆ. ಜಿಲ್ಲಾಧಿಕಾರಿಗಳು ಸಂಬಂಧ ಪಟ್ಟ ಅಧಿಕಾರಿ ಗಳ, ರೈತ ಸಂಘಟನೆಗಳ ಕಾರ್ಯಕರ್ತರ ಸಭೆ ನಡೆಸಿ ಸಮಸ್ಯೆ ಬಗೆಹರಿಸಿ ಕಾಮಗಾರಿ ಪುನರಾರಂಭಿಸಬೇಕು ಎಂದು ಅವರು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ವಿಜಯನಗರ ಜಿಲ್ಲಾಧಿಕಾರಿ ಅನಿರುದ್ಧ ಶ್ರವಣ್ ಅಧಿಕಾರಿಗಳ ಜೊತೆ ಮಾತನಾಡಿ ಕ್ರಮ ಕೈಗೊಳ್ಳುತ್ತೇನೆ ಎಂದು ಅವರು ತಿಳಿಸಿದರು.

ಉಪವಿಭಾಗಾಧಿಕಾರಿ ಎಚ್.ಜಿ. ಚಂದ್ರಶೇಖರಯ್ಯ, ತಹಶೀಲ್ದಾರ್ ಡಾ.ಶಿವ ಕುಮಾರ ಬಿರಾದಾರ, ರೈತ ಸಂಘದ ತಾಲ್ಲೂಕು ಅಧ್ಯಕ್ಷ ದ್ಯಾಮಜ್ಜಿ ಹನುಮಂತಪ್ಪ, ಗುಡಿಹಳ್ಳಿ ಹಾಲೇಶ್, ಮುಖಂಡರಾದ ಕರಡಿದುರ್ಗದ ಚೌಡಪ್ಪ, ಕಲ್ಲಹಳ್ಳಿ ಗೋಣೆಪ್ಪ, ಮಹಾದೇವಪ್ಪ, ಗೌರಿಹಳ್ಳಿ ಹನುಮಂತಪ್ಪ, ಕುಂಚೂರು ಶಫಿವುಲ್ಲಾ, ಪುರಸಭಾ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ, ಮಹಮದ್ ಇಬ್ರಾಹಿಂ, ಮಕರಬ್ಬಿ ದಾದಾಪೀರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸ್ಫಟಿಕ ಲಿಂಗ ಕಳ್ಳರನ್ನು ಬಂಧಿಸಲು ರವಿ ಪಾಟೀಲ ಒತ್ತಾಯ

ರಾಣೇಬೆನ್ನೂರು, ಜೂ.8- ಲಿಂಗದಹಳ್ಳಿ ಹಿರೇಮಠದಲ್ಲಿ ಸ್ಫಟಿಕ ಲಿಂಗ ಕಳ್ಳತನ ಮಾಡಿದವರನ್ನು ಶೀಘ್ರವೇ ಪತ್ತೆ ಮಾಡಿ, ಲಿಂಗವನ್ನು ವಶಪಡಿಸಿಕೊಂಡು ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಶ್ರೀ ಮಠದ ಭಕ್ತ, ರೈತ ನಾಯಕ ಪೊಲೀಸ್ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಈ ಘಟನೆಯಿಂದ ಪೀಠಾಧಿಪತಿ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಮತ್ತು ರಾಜ್ಯಾದ್ಯಂತ ಇರುವ ಮಠದ ಭಕ್ತರಿಗೆ ಬಹಳಷ್ಟು ನೋವಾಗಿದ್ದು, ಪೊಲೀಸರು ತಕ್ಷಣ ಕಳ್ಳರನ್ನು ಪತ್ತೆ ಮಾಡುವಂತೆ ಒತ್ತಾಯಿಸಿದ್ದಾರೆ.

# ಕೊಟ್ಟೂರು ಅಭಿವೃದ್ಧಿಗೆ 60 ಕೋಟಿ



**(1ನೇ ಪುಟದಿಂದ)** ಸರ್ಕಾರ ಅಧಿಕಾರಕ್ಕೆ ಬರಲಿದೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮತ್ತೆ ರಾಜ್ಯದ ಅಧಿಕಾರ ಹಿಡಿಯಲಿದ್ದು, ಆ ಅವಧಿಯಲ್ಲಿ ಕೊಟ್ಟೂರಿಗೆ ಸರ್ಕಾರಿ ಪದವಿ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಮಂಜೂರು ಮಾಡಿಸುವೆ ಎಂದು ಅವರು ಹೇಳಿದರು.

ಜಿ.ಪಂ. ಮಾಜಿ ಸದಸ್ಯ ಎಂ.ಎಂ.ಜೆ.ಹರ್ಷವರ್ಧನ್ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಜಿ.ಪಂ.ಮಾಜಿ ಉಪಾಧ್ಯಕ್ಷ ಪಿ.ಹೆಚ್.ದೊಡ್ಡರಾಮಣ್ಣ, ಪ.ಪಂ.ಸ್ಥಾಯಿ ಸಮಿತಿ ಅಧ್ಯಕ್ಷ ತೋಟದ ರಾಮಣ್ಣ, ಮುಖಂಡ ಪಿ. ಸುಧಾಕರ್ ಗೌಡ ಮಾತನಾಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಭಾರತಿ ಸುಧಾಕರ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಶಫಿ, ಮುಖಂಡರುಗಳಾದ ಪಿ.ಹೆಚ್ ದೊಡ್ಡರಾಮಣ್ಣ, ಸುಧಾಕರ್ ಪಾಟೀಲ್, ಪ.ಪಂ.ಸದಸ್ಯರುಗಳಾದ ಮರಬದ ಕೊಟ್ರೇಶ್, ವಿನಯ್ ಹೊಸಮನಿ, ಹಳ್ಳಿ ವಿದ್ಯಾಶ್ರೀ, ಶೈಲಜ ರಾಜೀವ್, ಲಕ್ಷ್ಮೀ ಚನ್ನಪ್ಪ, ಹನುಮವ್ವ, ಅಂಜಿನಮ್ಮ ವಿರುಪಾಕ್ಷಪ್ಪ, ಪಿ.ಜಗದೀಶ, ಎಂ.ಸಿ.ಕೆಂಗಪ್ಪ, ಸಿದ್ದಯ್ಯ, ಕಲ್ಲಪ್ಪ, ನಿವೃತ್ತ ಮುಖ್ಯಾಧಿಕಾರಿ ಹೆಚ್.ಎಫ್. ಬಿದರಿ, ಮುಟುಗನಹಳ್ಳಿ ಕೊಟ್ರೇಶ್, ಹರಾಳ್ ನಂಜಪ್ಪ, ಐ.ಎಂ.ದಾರುಕೇಶ, ಬೂದಿ ಶಿವಕುಮಾರ, ಡಿಶ್ ಮಂಜುನಾಥ, ಕೊಟ್ರಮ್ಮ ಅರಮನಿ, ಎಂ.ಜಿ.ಕೊಟ್ರೇಶ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಪ.ಪಂ.ಮುಖ್ಯಾಧಿಕಾರಿ ಎ.ನಸರುಲ್ಲಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಮನೋಹರ ಸ್ವಾಮಿ ಸ್ವಾಗತಿಸಿದರು. ಎಂ.ಜಿ.ವಿನಯ್‌ಕುಮಾರ್ ನಿರೂಪಿಸಿದರು.

## ಭಾರತ-ವಿಯೆಟ್ನಾಂ ಮಿಲಿಟರಿ ಸಹಕಾರ ಒಪ್ಪಂದಕ್ಕೆ ಸಹಿ

ಹನೋಯಿ, ಜೂ.8- ಭಾರತ ಮತ್ತು ವಿಯೆಟ್ನಾಂ ದ್ವಿಪಕ್ಷೀಯ ಮಿಲಿಟರಿ ಸಹಕಾರ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿವೆ.

ಈ ಮೂಲಕ ಇದೇ ಮೊದಲ ಬಾರಿಗೆ ವಿಯೆಟ್ನಾಂ ಬೇರೊಂದು ದೇಶದೊಂದಿಗೆ ಮಿಲಿಟರಿ ಸಹಕಾರ ಪ್ರಕ್ರಿಯೆಯನ್ನು ಸರಳಗೊಳಿಸುವ ಒಪ್ಪಂದ ಮಾಡಿಕೊಂಡಿದೆ.

ಮೂರು ದಿನಗಳ ಕಾಲ ಇಲ್ಲಿಗೆ ಭೇಟಿ ನೀಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಾತುಕತೆ ನಡೆಸಿದ ಬೆನ್ನಲ್ಲೇ ಈ ಒಪ್ಪಂದ ನಡೆದಿದೆ.

ಇದೇ ವೇಳೆ ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸುವ ಹಲವು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಜೂನ್ 8 ರಿಂದ ಮೂರು ದಿನಗಳ ಭೇಟಿಗಾಗಿ ಪ್ರಮುಖ ಆಗ್ನೇಯ ಏಷ್ಯಾ ದೇಶದಲ್ಲಿರುವ ಸಿಂಗ್, ವಿಯೆಟ್ನಾಂನ ರಾಷ್ಟ್ರೀಯ ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿಯಲ್ಲಿ ಗೌರವ ಸ್ವೀಕರಿಸಿದರು. ಸಿಂಗ್ ಅವರಿಗೆ ಜನರಲ್ ಜಿಯಾಂಗ್ ಅವರು ಭವ್ಯ ಸ್ವಾಗತ ನೀಡಿದರು.

ದ್ವಿಪಕ್ಷೀಯ ರಕ್ಷಣಾ ಕಾರ್ಯಗಳನ್ನು ಮತ್ತಷ್ಟು ವಿಸ್ತರಿಸಲು ಪರಿಣಾಮಕಾರಿ ಮತ್ತು ಪ್ರಾಯೋಗಿಕ ಉಪಕ್ರಮಗಳ ಕುರಿತು ವ್ಯಾಪಕ ಚರ್ಚೆಗಳು ಮತ್ತು ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಉಭಯ ದೇಶಗಳ ನಡುವೆ ನಡೆದವು ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

## ವರಿಷ್ಠರ ಅಭ್ಯರ್ಥಿಯೇ ಸಿಎಂ

**(1ನೇ ಪುಟದಿಂದ)** ಚೆಲುವರಾಯಸ್ವಾಮಿ ನಗರದ ಬೆಂಗಳೂರು ಕ್ಲಬ್‌ನಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜೊತೆ ಪ್ರತ್ಯೇಕವಾಗಿ ಚರ್ಚೆ ನಡೆಸಿ, ಪ್ರಸಕ್ತ ರಾಜಕೀಯ ವಾಸ್ತವ ಸ್ಥಿತಿಯನ್ನು ಅವರ ಮುಂದೆ ತೆರೆದಿಟ್ಟರು.

ನೀವು ಇದೇ ರೀತಿ ಭಿನ್ನ ನಿಲುವಿನಿಂದ ಮುಂದೆ ಸಾಗಿದರೆ, ಪಕ್ಷ ಅಧಿಕಾರಕ್ಕೆ ಬರುವುದಿಲ್ಲ. ನಾವೇ ಬಿಜೆಪಿಗೆ ಮತ್ತೆ ಅಧಿಕಾರ ಬಿಟ್ಟು ಕೊಡಬೇಕಾಗುತ್ತದೆ ಎಂದು ಉಭಯ ನಾಯಕರಿಗೆ ಮನವರಿಕೆ ಮಾಡಿದ್ದಾರೆ.

ಮೊದಲು ಸಿದ್ದರಾಮಯ್ಯ ಇವರ ಮಾತಿಗೆ ಸಮ್ಮತಿಸಿರಲಿಲ್ಲ. ನಾನು ಪಕ್ಷ ಕಟ್ಟಿ, ಮುಂದೆ ನಿಂತು ಹೋರಾಟ ನಡೆಸಿ, ಅಧಿಕಾರಕ್ಕೆ ಬಂದರೆ ಇನ್ನೊಬ್ಬರು ಮುಖ್ಯಮಂತ್ರಿಯಾಗಲು ಹೇಗೆ ಬಿಡಲಿ ಎಂದು ತಮ್ಮ ಮೊಂಡುವಾದಕ್ಕೆ ಬಿದ್ದಿದ್ದರು.

ಸಿದ್ದರಾಮಯ್ಯ ಒಮ್ಮೆ ಮುಖ್ಯಮಂತ್ರಿ ಯಾಗಿದ್ದಾರೆ. ಪಕ್ಷದಲ್ಲಿ ಬೇರೆಯವರಿಗೂ ಅವಕಾಶ ಬೇಡವೇ ಎಂದು ಶಿವಕುಮಾರ್ ತಮ್ಮ ನಿಲುವನ್ನು ಬಲವಾಗಿ ಸಮರ್ಥಿಸಿ ಕೊಂಡಿದ್ದರು.

ಇಡೀ ದಿನ ಚರ್ಚೆಯ ನಂತರ ಅಂತಿಮವಾಗಿ ವರಿಷ್ಠರು ಸೂಚಿಸಿದ ಅಭ್ಯರ್ಥಿಯೇ ಮುಖ್ಯಮಂತ್ರಿ. ಅದನ್ನು ಮುಂದೆ ಯಾರೂ ಪ್ರಶ್ನೆ ಮಾಡುವಂತಿಲ್ಲ ಎಂಬ ನಿಲುವನ್ನು ಕೆಳಹಂತದ ನಾಯಕರ ಸಲಹೆಯ ನಂತರ ಉಭಯ ನಾಯಕರು ಅವರ ಮಾತಿಗೆ ಮನ್ನಣೆ ನೀಡಿ, ಮುಂದೆ ಒಂದಾಗಿ ಹೋಗುವ ಭರವಸೆ ನೀಡಿದರು.

ಅಷ್ಟೇ ಅಲ್ಲ ಒಂದು ಹೆಜ್ಜೆ ಮುಂದೆ ಹೋದ ಸಿದ್ದರಾಮಯ್ಯ ಮುಂದಿನ ದಿನಗಳಲ್ಲಿ ನಾವು ಎಲ್ಲಿಯಾದರೂ ದಾರಿ ತಪ್ಪಿದರೆ, ಅದನ್ನು ನೀವು ನಮಗೆ ಹೇಳಿ, ಸರಿ ಮಾಡಿ ತಕ್ಷಣವೇ ತಿದ್ದಿಕೊಳ್ಳುತ್ತೇವೆ ಎಂಬ ಹೊಣೆಗಾರಿಕೆಯನ್ನು ಕೃಷ್ಣಭೈರೇಗೌಡ ಹಾಗೂ ದಿನೇಶ್‌ಗೆ ನೀಡಿದ್ದಾರೆ.

ಇದಕ್ಕೆ ಶಿವಕುಮಾರ್ ಕೂಡಾ ಸಹಮತ ವ್ಯಕ್ತಪಡಿಸಿದ್ದಾರೆ. ಈ ಬೆಳವಣಿಗೆಯ ನಂತರ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣೆಯಲ್ಲಿ ಎರಡನೇ ಅಭ್ಯರ್ಥಿಯನ್ನು ಕಣದಲ್ಲಿ ಮುಂದುವರೆಸುವ ವಿಷಯದಲ್ಲಿ ಒಮ್ಮತದ ನಿಲುವನ್ನು ತೆಗೆದುಕೊಂಡಿದ್ದಾರೆ.

ಇನ್ನು ಪಠ್ಯಪುಸ್ತಕದ ವಿಷಯದಲ್ಲೂ ಒಂದೇ ನಿಲುವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೂ ಮಿಗಿಲಾಗಿ ಪಕ್ಷ ಸಂಘಟನೆ ಮತ್ತು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಉಭಯ ನಾಯಕರು ಚರ್ಚೆ ಮಾಡಿದ ನಂತರವೇ ಕಾರ್ಯಕ್ರಮಗಳಿಗೆ ಚಾಲನೆ ದೊರೆಯುತ್ತಿದೆ.

ಅಂದಿನಿಂದ ಇದುವರೆಗೂ ಎಲ್ಲಿಯೂ ಭಿನ್ನಾಭಿಪ್ರಾಯದ ಮಾತುಗಳು ಕೇಳಿ ಬಂದಿಲ್ಲ. ಈ ಉಭಯ ನಾಯಕರು ಒಂದಾಗಿ ಸಾಗುತ್ತಿರುವುದರಿಂದ ಬಿಜೆಪಿ ಬಾಗಿಲು ಬಡಿದಿದ್ದ, ಕೆಲವು ನಾಯಕರು ಈಗ ಕಾಂಗ್ರೆಸ್‌ನಲ್ಲೇ ಉಳಿಯಲು ತೀರ್ಮಾನ ಕೈಗೊಂಡಿದ್ದಾರೆ.

## ಭತ್ತದ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

**(1ನೇ ಪುಟದಿಂದ)** 92 ರೂ.ಗಳ ಬೆಂಬಲ ಬೆಲೆ ಹೆಚ್ಚಿಸಲಾಗಿದೆ. ಸೋಯಾಗೆ ಶೇ.9ರಷ್ಟು ಹೆಚ್ಚಿನ ಬೆಲೆ ನಿಗದಿ ಪಡಿಸಲಾಗಿದೆ. ಜೋಳದ ಬೆಂಬಲ ಬೆಲೆಯನ್ನು ಶೇ.4ರಷ್ಟು ಹೆಚ್ಚಿಸಲಾಗಿದೆ.

# ಪುರಸಭೆ ಪ್ರಭಾರಿ ಅಧ್ಯಕ್ಷರಾಗಿ ಭೀಮವ್ವ



**(1ನೇ ಪುಟದಿಂದ)** ರಾಜಕಾರಣದಿಂದ ಹಿಂದೆ ಸರಿಯದೆ, ಉತ್ತಮ ರಾಜಕಾರಣಿಯಾಗಿ ಸಕ್ರಿಯರಾಗಲಿ ಎಂದರು.

ಪುರಸಭೆ ಕಚೇರಿಯಲ್ಲಿ ಸಿಬ್ಬಂದಿಗಳು, ಅಧಿಕಾರಿಗಳು ಸಾರ್ವಜನಿಕರಿಗೆ ಹತ್ತಿರವಾಗುವ ನಿಟ್ಟಿನಲ್ಲಿ ಉತ್ತಮವಾಗಿ ಕೆಲಸಮಾಡಿ. ಎಲ್ಲಾ ಸದಸ್ಯರು ಪಕ್ಷಾತೀತವಾಗಿ ಕೆಲಸ ಮಾಡುವ ಮೂಲಕ ಸಾರ್ವಜನಿಕ ವಿಶ್ವಾಸ ಗಳಿಸೋಣ ಎಂದರು.

ಬಿಜೆಪಿ ಮುಖಂಡ ಜಿ.ನಂಜನಗೌಡ್ರು ಮಾತನಾಡಿ, ರೈತರಿಗೆ ಪಹಣಿಗಳು ಸಿಕ್ಕಂತೆ, ಪುರಸಭೆಯಲ್ಲಿ ಪಟ್ಟಣದ ನಾಗರಿಕರಿಗೆ ಖಾತಾ ಪ್ರತಿಗಳು ಸಿಗುವಂತಾಗಬೇಕು, ಸಾರ್ವಜನಿಕರ ವಿಶ್ವಾಸದೊಂದಿಗೆ ಉತ್ತಮ ಆಡಳಿತ ನೀಡಿದಲ್ಲಿ ಪಟ್ಟಣದ ಅಭಿವೃದ್ಧಿಯಾಗಲು ಸಾಧ್ಯ ಎಂದರು.

ಎರಗುಡಿ ಶಿವಕುಮಾರ ಮಾತನಾಡಿ, ಪುರಸಭೆಯ ಕಂದಾಯ ವಿಭಾಗದಲ್ಲಿ ಒಬ್ಬರು ಕೆಲಸ ಮಾಡುತ್ತಿದ್ದಾರೆ. 17ಸಾವಿರ ಜನರ ಕೆಲಸ ಬಾಕಿ ಇದ್ದು, ಇವುಗಳನ್ನು ಪುಸ್ತಕದಲ್ಲಿ ಹುಡುಕುವುದಾಗಿದೆ. ಸಿಬ್ಬಂದಿಗಳ ಕೊರತೆ ಇದೆ. ಅನಗತ್ಯ ಸಮಸ್ಯೆಗಳು ಬರುತ್ತವೆ. ಗ್ರಾಮ ಠಾಣದಲ್ಲಿನ ಸಮಸ್ಯೆ ಹೆಚ್ಚು ಇದೆ, ಶಕ್ತಿ ಮೀರಿ ಕೆಲಸವನ್ನು ಮಾಡಲು ಸದಸ್ಯರ ಸಹಕಾರ ಕೋರಿದರು.

ಈ ವೇಳೆ ಪುರಸಭೆಯಿಂದ ನಿರ್ಗಮಿತ ಅಧ್ಯಕ್ಷರಿಗೆ ಹಾಗೂ ಪ್ರಭಾರಿ ಅಧ್ಯಕ್ಷರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಪುರಸಭೆ ಸದಸ್ಯರಾದ ಡಿ.ಅಬ್ದುಲ್ ರೆಹಮಾನ್, ಟಿ. ವೆಂಕಟೇಶ, ಹೆಚ್.ಅಶೋಕ, ಮಾತನಾಡಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಗೊಂಗಡಿ ನಾಗರಾಜ್, ಹೆಚ್.ಕೊಟ್ರೇಶ್, ಉದ್ದಾರ ಗಣೇಶ್, ಲಾಟಿ ದಾದಪೀರ್, ರುದ್ರಪ್ಪ, ಜಾವೀದ್, ಬಿಜೆಪಿ ಮುಖಂಡರಾದ, ನಿಟ್ಟೂರು ಸಣ್ಣ ಹಾಲಪ್ಪ, ಆರೋಗ್ಯ ನಿರೀಕ್ಷಕ ಮಂಜುನಾಥ್, ಸೇರಿದಂತೆ ಇತರರು ಇದ್ದರು.

# ಸಾರ್ವಜನಿಕರ ಹಿತ ನಿಮ್ಮ ಕರ್ತವ್ಯ

**(1ನೇ ಪುಟದಿಂದ)** ಗೋವು ಸಾಗಾಣಿಕೆದಾರರನ್ನು ಸಂಘಟನೆಗಳು ಹಿಡಿದು ಕೊಡುವುದಾದರೆ ನಿಮ್ಮ ಕೆಲಸವೇನು? ಸಬೂಬುಗಳನ್ನು ಹೇಳದೆ ಕೆಲಸ ಮಾಡಿ ತೋರಿಸಿ ಎಂದು ಸೂಚಿಸಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಮನೆಯಲ್ಲಿಯೂ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂಬ ದೂರುಗಳಿದ್ದು, ಮದ್ಯ ಮಾರಾಟಗಾರ ಹಾಗೂ ಮದ್ಯ ಪೂರೈಸುವವರನ್ನೂ ಹಿಡಿದು ಪ್ರಕರಣ ದಾಖಲಿಸಿ ಎಂದರು.

ನಿಮ್ಮ ವರದಿಯಲ್ಲಿ 1602 ರೌಡಿ ಶೀಟರ್‌ಗಳಿದ್ದಾರೆ ಎಂದು ತೋರಿಸಿದ್ದೀರಿ, ಒಂದು ಜಿಲ್ಲೆಯಲ್ಲಿ ಇಷ್ಟೊಂದು ರೌಡಿಗಳು ಇರಲು ಸಾಧ್ಯವೇ? ಯಾರದೇ ವಿರುದ್ಧ ದುರುದ್ದೇಶಪೂರ್ವಕ ರೌಡಿ ಶೀಟರ್ ಹಾಕುವುದು ಬೇಡ ಎಂದರು.


ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಮಾಹಿತಿ ನೀಡಿ ಧ್ವನಿವರ್ಧಕ ಬಳಕೆ ಸಂಬಂಧ 331 ಅರ್ಜಿಗಳು ಬಂದಿದ್ದು, 167ಕ್ಕೆ ಪರವಾನಗಿ ನೀಡಲಾಗಿದೆ.

ಧ್ವನಿವರ್ಧಕಗಳ ಡೆಸಿಬಲ್ ಪರೀಕ್ಷಿಸಲು ಪ್ರತಿ ಠಾಣೆಯಲ್ಲಿ ಒಬ್ಬ ಸಿಬ್ಬಂದಿ ಇರುತ್ತಾರೆ ಹಾಗೂ ನಿಗದಿತ ಅವಧಿಯೊಳಗೆ ಧ್ವನಿವರ್ಧಕಗಳು ಕಾರ್ಯ ನಿರ್ವಹಿಸುತ್ತಿವೆ ಎಂದರು.

ಕೆಲವರು ಒಂದು ವರ್ಷ ಹಾಗೂ ಎರಡು ವರ್ಷಗಳಿಗೆ ಅನುಮತಿ ಪಡೆದಿದ್ದಾರೆ ಎಂದರು ಹಾಗೂ ಇಲಾಖೆಯ ಪ್ರಗತಿ ಮಾಹಿತಿ ನೀಡಿದರು.


ಸಭೆಯಲ್ಲಿ ಐಜಿಪಿ ತ್ಯಾಗರಾಜನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಸರಗಿ ಹಾಗೂ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೆ.ಎನ್ ಅಮ್ಜದ್‌ಖಾನ್ ನಿಧನ



ದಾವಣಗೆರೆ ರಹಮಾನೀಯ ಮದರಸಾ ಮದೀನ ಆಟೋ ಸ್ಟ್ಯಾಂಡ್ ಹತ್ತಿರದ ವಾಸಿ ಕೆ.ಎನ್ ಅಮ್ಜದ್‌ಖಾನ್ (46) ಇವರು ದಿನಾಂಕ 8.6.2022ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.6.2022ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಪಿ.ಬಿ ರಸ್ತೆಯಲ್ಲಿರುವ ಹಳೇಖಬರಸ್ಥಾನದಲ್ಲಿ ನೆರವೇರಲಿದೆ.

## ಗೋಮಾಂಸ ಅಂಗಡಿಗಳು ತೆರೆಯದಂತೆ ಸೂಚನೆ



ಹರಿಹರ, ಜೂ 7- ನಗರದಲ್ಲಿ ನಿನ್ನೆ ಯಿಂದ ಕಟ್ಟುನಿಟ್ಟಾಗಿ ಗೋ ಮಾಂಸದ ಅಂಗಡಿಗಳನ್ನು ತೆರೆಯದಂತೆ ನಗರ ಠಾಣೆಯ ಪಿಎಸ್‌ಐ ಸುರೇಶ್ ಅಂಗಡಿ ಮಾಲೀಕರಿಗೆ ಸೂಚನೆ ನೀಡಿದ್ದರಿಂದಾಗಿ ನಗರದಲ್ಲಿನ ಎಲ್ಲಾ ಗೋ ಮಾಂಸದ ಅಂಗಡಿಗಳು ಮುಚ್ಚಿದ್ದು ಕಂಡುಬಂತು.

ಸರ್ಕಾರದ ಆದೇಶದ ಪ್ರಕಾರ ಗೋ ಮಾಂಸವನ್ನು ಮಾರಾಟ ಮಾಡುವುದಕ್ಕೆ ನಗರಸಭೆಯ ವತಿಯಿಂದ ಇತ್ತೀಚಿನ ವರ್ಷದ ದೃಢೀಕರಣ ಪತ್ರವನ್ನು ಪಡೆದಿರಬೇಕು. ಆದರೆ ನಗರದಲ್ಲಿ ಇರುವ ಮಾಂಸದ ಅಂಗಡಿಗಳು 2006 ವರ್ಷಗಳ ಹಿಂದಿನ ದೃಢೀಕರಣ ಪತ್ರವನ್ನು ಇಟ್ಟುಕೊಂಡು ವ್ಯಾಪಾರ ವಹಿವಾಟು ಮಾಡುತ್ತ ಬಂದಿದ್ದು, ನಿನ್ನೆ ಗೋ ಮಾಂಸದ ಅಂಗಡಿಗಳಿಗೆ ಭೇಟಿಮಾಡಿ ಪರಿಶೀಲನೆ ನಡೆಸಿದಾಗ ಎಲ್ಲಾ ವ್ಯಾಪಾರಿಗಳು ಇತ್ತೀಚಿನ ದೃಢೀಕರಣ ಪತ್ರವನ್ನು ಪಡೆಯದೆ ಇರುವುದರಿಂದ ಅವರಿಗೆ ಗೋ ಮಾಂಸವನ್ನು ಮಾರಾಟ ಮಾಡದಂತೆ ಮತ್ತು ಕಾನೂನು ಉಲ್ಲಂಘನೆ ಮಾಡಿ ಯಾರಾದರೂ ವ್ಯಾಪಾರ ವಹಿವಾಟು ಮಾಡಿದರೆ ಅಂತ ವ್ಯಾಪಾರಿಗಳ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಆಗಾಗಿ ಇವತ್ತು ಸಂತೆಯ ದಿನವಾಗಿದ್ದರೂ ಸಹ ಯಾವುದೇ ಗೋ ಮಾಂಸದ ಅಂಗಡಿಗಳು ತರೆದಿರಲಿಲ್ಲ.

## ಏಳನೇ ವರ್ಷದ ಪುಣ್ಯಸ್ಮರಣೆ



**ದಿ|| ಶರಣೆ ಶ್ರೀಮತಿ**
**ಕಾಯಕ ಯೋಗಿ ಚನ್ನಬಸಮ್ಮ**
(ಶ್ರೀ ದಿ|| ಕರಿಯಪ್ಪ ದುಂಡಜ್ಜನವರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಇಂದಿಗೆ
ಏಳು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ
**ಮಕ್ಕಳು, ಮೊಮ್ಮಕ್ಕಳು,**
**ಸೊಸೆಯಂದಿರು, ಸಹೋದರ,**
**ಸಹೋದರಿಯರು ಮತ್ತು**
**ಬಂಧು-ಮಿತ್ರರು, ದಾವಣಗೆರೆ.**

## ಹೊನ್ನಮರಡಿ ಹೆಚ್.ಇ. ಕರಿಬಸಯ್ಯ ನಿಧನ



ದಾವಣಗೆರೆ ತಾಲ್ಲೂಕು ಹೊನ್ನಮರಡಿ ಗ್ರಾಮದ ವಾಸಿ ದಿ.ಏಕಾಂತಯ್ಯನವರ ಪುತ್ರ **ಹೆಚ್.ಇ. ಕರಿಬಸಯ್ಯ** (42) ಇವರು ದಿನಾಂಕ : 08.06.2022ರ ತಡರಾತ್ರಿ 12.25ಕ್ಕೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 09.06.2022 ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಹೊನ್ನಮರಡಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
**ಮೊ: 87470 41842, 95357 64689**

# ಬುದ್ಧಿವಂತರಿಗಿಂತ ಪ್ರಜ್ಞಾವಂತರು ಶ್ರೇಷ್ಠ

**(1ನೇ ಪುಟದಿಂದ)** ಪರಿವಾರದ ಕುರಿತು ಚಿಂತಿಸುತ್ತಾರೆ. ಬುದ್ಧಿವಂತರು ತಮ್ಮ ಪರಿವಾರದೊಂದಿಗೆ ತಮ್ಮ ಸುತ್ತಲಿನ ಪರಿಸರ ಅವಲೋಕಿಸುತ್ತಾರೆ. ಪ್ರಜ್ಞಾವಂತರು ವೃಷ್ಠಿ ಮತ್ತು ಸಮಷ್ಠಿಯ ಅಭ್ಯುದಯವನ್ನು ಬಯಸುತ್ತಾರೆ ಎಂದು ಹೇಳಿದರು.

ವಿದ್ಯಾವಂತ ಮತ್ತು ಬುದ್ದಿವಂತ ತಮ್ಮ ಸ್ವಾರ್ಥಕ್ಕಾಗಿ ವಂಚನೆ ಮಾಡಬಹುದು. ಪ್ರಜ್ಞಾವಂತ ಮಾತ್ರ ಎಂದಿಗೂ ಮೋಸ ಮಾಡಲಾರ. ಬದ್ಧತೆಯೊಂದಿಗೆ ಬದುಕು ಸಾಗಿಸುತ್ತಾನೆ. ಮೋಸ, ವಂಚನೆ ಮಾಡುವವರನ್ನು ಪರಿವರ್ತಿಸುವ ಶಕ್ತಿ ಪ್ರಜ್ಞಾವಂತರಿಗಿದೆ ಎಂದು ನುಡಿದರು.

ಇಂತಹ ಪ್ರಜ್ಞಾವಂತರ ಸಾಲಿಗೆ ಸಮಾಜ ಸೇವಕ, ಉದಯೋನ್ಮುಖ ನಾಯಕ ಬಿ.ಜೆ. ಅಜಯ್ ಕುಮಾರ್ ಸೇರುತ್ತಾರೆ. ಅವರದು ನಿರ್ವಂಚನೆಯ ಬದುಕು. ನಿಸ್ವಾರ್ಥ ಸೇವೆ ಅನುಕರಣೀಯವಾದುದು ಎಂದರು.

ಬಸವ ಜಯಂತಿ ಮೆರವಣಿಗೆ ಜನಮಾನಸದಲ್ಲಿ ಉಳಿಯುವಂತಾಯಿತು. ಇಂತಹ ಜನಪರ ಕಾಳಜಿಯುಳ್ಳ ವ್ಯಕ್ತಿ ಮುಂದಿನ ದಿನಗಳಲ್ಲಿ ಸದೃಢ ನಾಯಕನಾಗಿ ಬೆಳೆಯಲಿ, ಅವರ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಅಜಯ್ ಕುಮಾರ್ ಶೂನ್ಯದಿಂದ, ಅನುಭವದ ಪಾಠ ಕಲಿತು ಎತ್ತರಕ್ಕೆ ಬೆಳೆಯುತ್ತಿದ್ದು, ಯಾವ ಪ್ರತಿಫಲಾಪೇಕ್ಷೆಯಿಲ್ಲದೇ ಸ್ವಸಾಮರ್ಥ್ಯದಿಂದ ಯುವ ಚಾಣಾಕ್ಷ ರಾಜಕಾರಣಿಯಾಗಿ ರಾಜಕೀಯ ಮತ್ತು ಸಾಮಾಜಿಕ ರಂಗದಲ್ಲಿ ಮಿಂಚುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಶ್ರೀ ಬಸವಪ್ರಭು ಸ್ವಾಮೀಜಿ ಸಹ ಬಸವೇಶ್ವರರ ಹಾದಿಯಲ್ಲಿ ಮುನ್ನಡೆಯುತ್ತಿದ್ದು, ಬಸವಣ್ಣನವರ ತತ್ವ-ಸಿದ್ಧಾಂತಗಳನ್ನು ಪಾಲಿಸುವ ಜೊತೆಗೆ ಎಲ್ಲಾ ಸಮಾಜದವರನ್ನು ಅಪ್ಪಿಕೊಂಡು ಬಸವ ಮಾರ್ಗದಲ್ಲಿ ಹೆಜ್ಜೆ ಹಾಕುತ್ತಿರುವ ಶ್ರೀಗಳ ಸಮಾಜ ಸೇವಾ ಕಾರ್ಯ ಶ್ಲಾಘನೀಯ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಬಿ.ಜೆ. ಅಜಯ್‌ಕುಮಾರ್ ಅವರು, ಎಲ್ಲರ ಸಹಕಾರ ಇರುವ ಕಾರಣದಿಂದಲೇ ಬಸವ ಜಯಂತಿ ಮೆರವಣಿಗೆ ಯಶಸ್ವಿಯಾಗಿ ನೆರವೇರಲು ಸಾಧ್ಯವಾಯಿತು ಎಂದರು.

ನನಗೆ ಜವಾಬ್ದಾರಿ ವಹಿಸಿದರೆ ಮುಂದಿನ ವರ್ಷ ಕೂಡ ಈ ಬಾರಿಗಿಂತ ವಿಜೃಂಭಣೆಯ ಬಸವ ಜಯಂತಿಯನ್ನು ಆಚರಣೆ ಮಾಡಿ ತೋರಿಸುತ್ತೇನೆ. ಇದು ನನ್ನೊಬ್ಬನಿಂದಲೇ ಸಾಧ್ಯವಿಲ್ಲ. ಹಿರಿಯರು, ಯುವ ಮಿತ್ರರು ಹಾಗೂ ಬಸವ ಭಕ್ತರ ಸಹಕಾರ, ಸಹಾಯದಿಂದ ಸಾಧ್ಯ ಎಂದು ಹೇಳಿದರು.

ಜಿ.ಪಂ. ಮಾಜಿ ಸದಸ್ಯ ತೇಜಸ್ವಿ ಪಟೇಲ್ ಮಾತನಾಡಿ, ಬಿಜೆಪಿ ತತ್ವ-ಸಿದ್ಧಾಂತಗಳು ನಮಗೆ ಹೊಂದಾಣಿಕೆ ಯಾಗುವುದಿಲ್ಲ. ಬಿಜೆಪಿ ಹೊರತಾಗಿ ಯುವ ನಾಯಕ ಬಿ.ಜೆ. ಅಜಯ್ ಕುಮಾರ್ ಅವರ ಸಾಮಾಜಿಕ, ರಾಜಕೀಯ ಬದುಕು ಉಜ್ವಲವಾಗಲಿ ಎಂದು ಹಾರೈಸಿದರು.

ವಾಗ್ಮಿ ಹೆಚ್.ವಿ. ಮಂಜುನಾಥಸ್ವಾಮಿ ಅವರು ಅಭಿನಂದನಾ ನುಡಿಗಳನ್ನು ನುಡಿದರು. ಎಂ.ವಿ. ಎಫ್. ಸಂಘದ ಕಾರ್ಯದರ್ಶಿ ಎಂ. ಜಯಕುಮಾರ್, ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದರಾಜ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಸಿ.ಆರ್. ನಸೀರ್ ಅಹಮದ್, ದುರ್ಗಾಂಬಿಕಾ ದೇವಸ್ಥಾನ ಸಮಿತಿ ಧರ್ಮದರ್ಶಿ ಗೌಡ್ರು ಚನ್ನಬಸಪ್ಪ, ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಶ್ರೀಮತಿ ಚೇತನಾ ಶಿವಕುಮಾರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಶ್ರೀಮತಿ ಅಜಯ್ ಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ವಿರಕ್ತಮಠ ಧರ್ಮದರ್ಶಿಗಳ ಸಮಿತಿ ಕಾರ್ಯದರ್ಶಿ ಕಣಕುಪ್ಪಿ ಮುರುಗೇಶಪ್ಪ, ವನಜಾ ಮಹಾಲಿಂಗಯ್ಯ, ಬಸವ ಕಲಾ ಲೋಕದ ಅಧ್ಯಕ್ಷ ಶಶಿಧರ ಬಸಾಪುರ, ಮಹಿಳಾ ಬಸವ ಕೇಂದ್ರದ ಅಧ್ಯಕ್ಷೆ ಮಹಾದೇವಮ್ಮ, ಜಾಗತಿಕ ಲಿಂಗಾಯತ ಮಹಾಸಭಾದ ಕಾರ್ಯದರ್ಶಿ ಮರುಳಸಿದ್ಧಯ್ಯ, ಬಸವ ಬಳಗದ ಅಗಡಿ ಮಹಾಂತೇಶ್, ಶಿವಯೋಗಾಶ್ರಮ ಟ್ರಸ್ಟ್ ಕಾರ್ಯದರ್ಶಿ ಅಂದನೂರು ಮುಪ್ಪಣ್ಣ ಮತ್ತಿತರರಿದ್ದರು.

### ಟಾಂಗ್ ಕೊಟ್ಟ ಬಾಡದ ಆನಂದರಾಜ್

ಬಿ.ಜೆ. ಅಜಯ್ ಕುಮಾರ್ ಅವರಿಗೆ ನಮ್ಮ ಶುಭ ಹಾರೈಕೆ ಇರುತ್ತದೆ. ಆದರೆ ಬಿಜೆಪಿಗೆ ಅಲ್ಲ ಎಂಬ ತೇಜಸ್ವಿ ಪಟೇಲ್ ಮಾತಿಗೆ ಟಾಂಗ್ ಕೊಟ್ಟ ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡಾದ ಆನಂದರಾಜ್ ಅವರು, ಅಜಯ್ ಕುಮಾರ್ ಅವರನ್ನು ಮಹಾನಗರ ಪಾಲಿಕೆ ಸದಸ್ಯರನ್ನಾಗಿ ಮತ್ತು ಮೇಯರ್ ಆಗಿ ಮಾಡಿದ್ದು ಬಿಜೆಪಿ. ಇಂತಹ ಯುವ ನಾಯಕನಿಗೆ ಬಿಜೆಪಿಯಲ್ಲಿ ಉತ್ತಮ ಭವಿಷ್ಯವಿದೆ ಎಂದರು.

# ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲು ಕ್ರಮ: ಡಿಸಿ ಬೀಳಗಿ



ದಾವಣಗೆರೆ, ಜೂ.8- ಮ್ಯಾನುವಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಅಧಿನಿಯಮದಡಿ ವಸತಿ ರಹಿತರಿಗೆ ಪುನರ್ವಸತಿ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಬುಧವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಮ್ಯಾನುವಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ-2013 ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ವತಿಯಿಂದ ಎಲ್ಲಾ ಮ್ಯಾನುಯೆಲ್ ಸ್ಕ್ಯಾವೆಂಜರ್ಸ್ ಕುಟುಂಬಗಳಿಗೆ 40,000 ರೂ. ಬಂದಿದೆ ಹಾಗೂ ಯಾರಿಗೆ ನಿವೇಶನ ಇಲ್ಲವೋ ಅವರಿಗೆ ನಿವೇಶನ ಮತ್ತು ನಿವೇಶನ ಹೊಂದಿದವರಿಗೆ ಮನೆಯನ್ನು ನಿರ್ಮಾಣ ಮಾಡಿಕೊಳ್ಳಲು ಸಹಾಯಧನ ಕಲ್ಪಿಸುವಂತೆ ಸಂಬಂಧಪಟ್ಟ ನಿಗಮಗಳಿಗೆ ಶಿಫಾರಸ್ಸು ಮಾಡಲಾಗುವುದು. ನಿವೇಶನ ಅಥವಾ ವಸತಿ ಸೌಲಭ್ಯಕ್ಕಾಗಿ ಫಲಾನುಭವಿಗಳು ಮಧ್ಯವರ್ತಿಗಳಿಗೆ ಯಾವುದೇ ರೀತಿಯ ಹಣನೀಡದೆ ನೇರವಾಗಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಮಾಡಿ ಎಂದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ರೇಷ್ಮಾ ಕೌಸರ್ ಮಾಹಿತಿ ನೀಡಿ, ವಿಶೇಷ ಮರು ಸಮೀಕ್ಷೆಯಲ್ಲಿ ಗುರುತಿಸಿರುವ 380 ಜನ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳಲ್ಲಿ ನವದೆಹಲಿಯ ಎನ್.ಎಸ್.ಕೆ.ಎಫ್.ಡಿ.ಸಿ ನೀಡಿರುವ ಐಡಿ ಸಂಖ್ಯೆಯಂತೆ ಪ್ರಸ್ತುತ ಎಲ್ಲರಿಗೂ ಐಡಿ ಕಾರ್ಡ್ ವಿತರಿಸಲಾಗಿದೆ. 369 ಜನರಿಗೆ 40 ಸಾವಿರ ರೂ.ಗಳು ಬ್ಯಾಂಕ್ ಖಾತೆಗೆ ಬಿಡುಗಡೆಯಾಗಿದೆ. ಬಾಕಿ ಇರುವ 11 ಜನರಿಗೆ ಹಣ ಬಿಡುಗಡೆ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮಾತನಾಡಿ, ಪಾಲಿಕೆಯಿಂದ 20 ಜನ ಫಲಾನುಭವಿಗಳಿಗೆ ಬೀದಿ ಬದಿ ತಳ್ಳುವ ಗಾಡಿ ವಿತರಿಸಿದೆ. 46 ಜನ ಫಲಾನುಭವಿಗಳಿಗೆ ಜೆರಾಕ್ಸ್ ಯಂತ್ರ ವಿತರಿಸಿದ್ದು, 55 ಜನರಿಗೆ ಹೊಲಿಗೆ ಯಂತ್ರ ಹಾಗೂ 18 ಫಲಾನುಭವಿಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಯು.ಜಿ.ಡಿ ಕಾರ್ಮಿಕರನ್ನಾಗಿ ನೇಮಕ ಮಾಡಲಾಗಿದೆ ಎಂದರು.

ನಾಮ ನಿರ್ದೇಶಿತ ಸದಸ್ಯರಾದ ಬಾಬಣ್ಣ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಸಾಕಷ್ಟು ಜನರು ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಇದ್ದು ಅವರಿಗೆ ಸೌಲಭ್ಯಗಳು ತಲುಪುತ್ತಿಲ್ಲ ಎಂದರು. ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ ಎಲ್ಲಾ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿ ಮಾಡಿಕೊಡಿ ಅವರಿಗೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಮತ್ತೊಬ್ಬ ಸದಸ್ಯ ವಾಸು ಮಾತನಾಡಿ, ಪಾಲಿಕೆಗೆ ನಮ್ಮ ಸಮಸ್ಯೆಗಳ ಕುರಿತು ಹೇಳಿಕೊಳ್ಳಲು ಹೋದಾಗ ಅಲ್ಲಿನ ಅಧಿಕಾರಿಗಳು ನಮಗೆ ಸರಿಯಾಗಿ ಸ್ಪಂದನೆ ನೀಡುತ್ತಿಲ್ಲ ಎಂದು ದೂರಿದರು. ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ ಪಾಲಿಕೆ ಅಧಿಕಾರಿಗಳು ತಮ್ಮ ಇತರೆ ಕೆಲಸಗಳ ನಡುವೆಯೂ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ ಎಂದು ಸೂಚಿಸಿದರು.

ಸಭೆಯಲ್ಲಿ ಜಿ.ಪಂ ಸಿಇಒ ಡಾ.ಎ.ಚನ್ನಪ್ಪ, ಡಿಯುಡಿಸಿ ಅಧಿಕಾರಿ ನಜ್ಮಾ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜಾನಾಯ್ಕ ಸೇರಿದಂತೆ ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಮೇಲ್ವಿಚಾರಣಾ ಸಮಿತಿ ಸದಸ್ಯರು, ಪದಾಧಿಕಾರಿಗಳು ಹಾಜರಿದ್ದರು.

# ಸಾಲ ತೀರಿಸಿ ಬ್ಯಾಂಕ್ ಅಭಿವೃದ್ಧಿಗೆ ಸಾಕ್ಷಿಯಾಗಿ




ದಾವಣಗೆರೆ, ಜೂ.8- ಬ್ಯಾಂಕ್‌ಗಳು ನಿಯಮಾನುಸಾರ ನೀಡುವ ಸಾಲದ ಸೌಲಭ್ಯಗಳನ್ನು ಪಡೆದ ಗ್ರಾಹಕರು ತಾವು ಪಡೆದ ಸಾಲವನ್ನು ಸೂಕ್ತ ಸಮಯದಲ್ಲಿ ಮರುಪಾವತಿಸುವ ಮೂಲಕ ಬದುಕಿಗೆ ಆಸರೆಯಾದ ಬ್ಯಾಂಕ್ ಗಳ ಅಭಿವೃದ್ಧಿಗೆ ಸಹಕಾರಿಯಾಗಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಅವರು, ಇಂದು ನಗರದ ವಿದ್ಯಾನಗರದ ಕುವೆಂಪು ಕನ್ನಡ ಭವನದಲ್ಲಿ ಲೀಡ್ ಬ್ಯಾಂಕ್ ಕಚೇರಿ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಸಾಲ ಸಂಪರ್ಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬ್ಯಾಂಕ್ ಗಳಿಂದ ಸಾಲ ಪಡೆದವರು ತಮ್ಮ ಬದುಕನ್ನು ಕಟ್ಟಿಕೊಳ್ಳುವ ಕೆಲಸ ಮಾಡಬೇಕು. ಅಲ್ಲದೆ ಸರಿಯಾಗಿ ಮರುಪಾವತಿ ಮಾಡುವುದರ ಮುಖೇನ ಬ್ಯಾಂಕ್ ಅಭಿವೃದ್ಧಿಗೆ ಸಾಕ್ಷಿಯಾಗಬೇಕಾಗಿರುವುದು ಪ್ರತಿಯೊಬ್ಬ ಸಾಲಗಾರನ ಜವಾಬ್ದಾರಿ ಆಗಿದೆ. ಆದರೆ, ಬ್ಯಾಂಕುಗಳಿಗೆ ಮೋಸ ಮಾಡುವ ದುರಾಲೋಚನೆ ಇರಬಾರದು. ಹಾಗಾದಲ್ಲಿ ಮಾತ್ರ ಬ್ಯಾಂಕುಗಳು ಹೆಚ್ಚು ಗ್ರಾಹಕರಿಗೆ ಸಾಲ ನೀಡಲು ಸಾಧ್ಯ ಎಂದರು.

ಕಾರ್ಯಕ್ರಮದ ಹೆಸರೇ ಸೂಚಿಸುವಂತೆ ಸಾಲ ಸಂಪರ್ಕ ಕಾರ್ಯಕ್ರಮದಿಂದ ಬ್ಯಾಂಕುಗಳು ಮತ್ತು ಗ್ರಾಹಕರ ನಡುವೆ ಬಾಂಧವ್ಯ ವೃದ್ಧಿಸಲಿದೆ. ಆರ್ಥಿಕ ಅಭಿವೃದ್ಧಿ, ಸುಸ್ಥಿರ ಬೆಳವಣಿಗೆ, ಆರ್ಥಿಕ ಸುಧಾರಣೆಗೆ ಇಂತಹ ಕಾರ್ಯಕ್ರಮಗಳು ನೆರವಾಗಲಿವೆ. ಕೋವಿಡ್ ಸಂಕಷ್ಟದ ಸಮಯದಲ್ಲಿ ಬ್ಯಾಂಕುಗಳು ಸಾರ್ವಜನಿಕರಿಗೆ ಅತ್ಯುತ್ತಮ ಸೇವೆ ನೀಡಿವೆ ಎಂದು ಶ್ಲಾಘಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಎ. ಚನ್ನಪ್ಪ ಮಾತನಾಡಿ, ಇದು ಮಾಹಿತಿ ಯುಗ, ತಂತ್ರಜ್ಞಾನ ಯುಗವಾಗಿದ್ದು, ಬ್ಯಾಂಕ್ ಮತ್ತು ಅವುಗಳ ಸಾಲ-ಸೌಲಭ್ಯಗಳ ಬಗ್ಗೆಯೂ ತಕ್ಷಣವೇ ಮಾಹಿತಿ ಸಿಗಲಿದೆ ಎಂದ ಅವರು, ಸಾಲವನ್ನು ನ್ಯಾಯಯುತವಾಗಿ ಮರು ಪಾವತಿ ಮಾಡಿದಾಗ ಗ್ರಾಹಕರ ಸ್ವಾವಲಂಬಿ ಬದುಕಿನ ಜೊತೆಗೆ ಬ್ಯಾಂಕ್‌ಗಳು ಏಳಿಗೆ ಕಾಣಬಹುದು. ಅಲ್ಲದೇ ದೇಶದ ಆರ್ಥಿಕ ಪರಿಸ್ಥಿತಿ ಸದೃಢವಾಗುವುದು ಎಂದರು.

ನಬಾರ್ಡ್‌ನ ಜಿಲ್ಲಾ ವ್ಯವಸ್ಥಾಪಕ ವಿ. ರವೀಂದ್ರ ಮಾತನಾಡಿ, ನಬಾರ್ಡ್‌ನಿಂದ ನಿರ್ಮಾಣ ಕಾಮಗಾರಿ, ಉತ್ಪಾದಕ ಘಟಕಗಳಿಗೆ ಸಬ್ಸಿಡಿ ಸಹಿತ ಸಾಲ ಸೌಲಭ್ಯ ದೊರಕಲಿದೆ. ಆದರೆ ಕಳೆದ 2 ವರ್ಷಗಳಿಂದ ಕೊವಿಡ್ ನಿಂದಾಗಿ ಯಾವುದೇ ಸಬ್ಸಿಡಿ ಸಾಲ ನೀಡಲಾಗುತ್ತಿಲ್ಲ. ಅಕ್ಟೋಬರ್ ನಂತರ ಪುನಃ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದರು.

**ಲೀಡ್ ಬ್ಯಾಂಕ್ ಕಚೇರಿಯ ಸಾಲ ಸಂಪರ್ಕ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಬೀಳಗಿ ಕರೆ**

ಲೀಡ್ ಬ್ಯಾಂಕ್ ವಿಭಾಗೀಯ ಪ್ರಬಂಧಕ ಜಿ.ಜಿ. ದೊಡ್ಡಮನಿ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅರ್ಥಪೂರ್ಣ ಆಚರಣೆಯ ಭಾಗವಾಗಿ ಕೇಂದ್ರ ಹಣಕಾಸು ಸಚಿವಾಲಯದ ಹಣಕಾಸು ಸೇವೆಗಳ ಇಲಾಖೆಯ ಸೂಚನೆಯಂತೆ ಇಂದು ದೇಶದಾದ್ಯಂತ 75 ಕೇಂದ್ರಗಳಲ್ಲಿ ಗ್ರಾಹಕರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಸಾಲ ಸಂಪರ್ಕ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಜೂನ್ 6ರಿಂದ 12ರ ತನಕ ವಿಶೇಷ ಸಪ್ತಾಹವನ್ನಾಗಿ ಆಚರಿಸುವ ಮೂಲಕ ಹಣಕಾಸು ಸೇವೆಗೆ ಸಂಬಂಧಪಟ್ಟಂತೆ ಹಲವಾರು ಕಾರ್ಯಕ್ರಮ ನಡೆಸುತ್ತಿದ್ದೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆನರಾ ಬ್ಯಾಂಕ್ ದಾವಣಗೆರೆ ಕ್ಷೇತ್ರೀಯ ಕಾರ್ಯಾಲಯದ ಸಹಾಯಕ ಮಹಾ ಪ್ರಬಂಧಕ ವೈ.ವಿ.ಎನ್. ಶಿವಪ್ರಸಾದ್ ಮಾತನಾಡಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರದ ಮತ್ತು ಬ್ಯಾಂಕುಗಳ ಯೋಜನೆಯ ಲಾಭ ಸಿಗಬೇಕು ಎನ್ನುವುದು ನಮ್ಮ ಆಶಯ ಎಂದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಹಾಯಕ ಮಹಾಪ್ರಬಂಧಕ ಅನಿಲ್ ಬಿಹಾರಿ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಸಹಾಯಕ ಮಹಾಪ್ರಬಂಧಕ ನಾಗೇಶ್ ಪ್ರಭು, ಡಿಡಿಸಿಸಿ ಬ್ಯಾಂಕಿನ ಉಪ ಮಹಾಪ್ರಬಂಧಕ ಗುರುರಾಜ್ ಎನ್. ಅಂಬೇಕರ್ ಸೇರಿದಂತೆ ಇತರರು ಇದ್ದರು. ರಾಘವೇಂದ್ರ ನಾಯರಿ ನಿರೂಪಿಸಿದರು. ಎನ್. ರಾಮಮೂರ್ತಿ ಸ್ವಾಗತಿಸಿದರು. ಮೂರ್ತಿನಾಯ್ಕ ವಂದಿಸಿದರು.

# ಬೇಲಿಮಲ್ಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ನೀಲಮ್ಮ ಆಯ್ಕೆ



ಹೊನ್ನಾಳಿ, ಜೂ.8- ತಾಲ್ಲೂಕಿನ ಬೇಲಿಮಲ್ಲೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷೆಯಾಗಿ ನೀಲಮ್ಮ ಬಿ.ಎನ್. ಉಮೇಶ್ ಅವರು ಮಂಗಳವಾರ ಅವಿರೋಧವಾಗಿ ಆಯ್ಕೆಯಾದರು. ಎಚ್. ನಾಗರಾಜ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಸಲಾಯಿತು ಎಂದು ಚುನಾವಣಾಧಿಕಾರಿಯಾಗಿದ್ದ ಕರ್ನಾಟಕ ನೀರಾವರಿ ನಿಗಮದ ಸಾಸ್ವೇಹಳ್ಳಿ ಉಪ ವಿಭಾಗದ ಇಂಜಿನಿಯರ್ ಜೆ.ಇ. ರಾಜೇಂದ್ರಪ್ರಸಾದ್ ತಿಳಿಸಿದ್ದಾರೆ.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹಾಗು ಮುಖಂಡರು ಉಪಾಧ್ಯಕ್ಷೆ ನೀಲಮ್ಮ ಅವರನ್ನು ಅಭಿನಂದಿಸಿದರು. ಬೇಲಿಮಲ್ಲೂರು ಗ್ರಾಪಂ ಸದಸ್ಯರಾದ ಕೆ.ಎನ್. ಹನುಮಂತಪ್ಪ, ಎಚ್. ನಾಗರಾಜ್, ಚಂದ್ರಪ್ಪ, ಮಂಜಮ್ಮ, ಜಯಪ್ಪ, ಜಿ.ಎಸ್. ಲಕ್ಷ್ಮಿ, ರತ್ನಮ್ಮ, ಪಿ.ಬಿ. ಹನುಮಂತಪ್ಪ, ಕಮಲಮ್ಮ, ಗೀತಮ್ಮ, ಎಂ.ಡಿ. ಸವಿತಾ, ಎ.ಕೆ. ಅಣ್ಣಪ್ಪ, ಶಾಂತಾಬಾಯಿ, ಪಿಡಿಒ ಕೆ. ಅರುಣ್, ಕಾರ್ಯದರ್ಶಿ ಎಚ್.ಕೆ. ವೀರಣ್ಣ, ತಾಲ್ಲೂಕು ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಬಿ.ಎನ್. ಉಮೇಶ್, ಮುಖಂಡರಾದ ಮಂಜಪ್ಪ, ನಾಗರಾಜ್ ಇತರರು ಇದ್ದರು.

# ಪ್ರಮೋದ್ ಮುತಾಲಿಕ್ ವಿರುದ್ಧ ಕ್ರಮ ಕೈಗೊಳ್ಳಲು ಸಚಿವರಿಗೆ ಒತ್ತಾಯ



ದಾವಣಗೆರೆ, ಜೂ.8- ಶ್ರೀರಾಮ ಸೇನೆಯ ಮುಖಂಡ ಪ್ರಮೋದ್ ಮುತಾಲಿಕ್ ಹಾಗೂ ಅವರ ಸಂಘಟಕರು ಶಾಂತಿಗೆ ಭಂಗ ತರುವ ನಿಟ್ಟಿನಲ್ಲಿ ಪ್ರಚೋದನಕಾರಿ ಭಾಷಣ ಮಾಡುತ್ತಿದ್ದು, ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ವತಿಯಿಂದ ಬುಧವಾರ ಎಸ್ಪಿ ಕಚೇರಿ ಆವರಣದಲ್ಲಿ ಗೃಹ ಸಚಿವ ಅರಗ ಜ್ಞಾನೇಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಎಂ.ಬಿ. ಮೊಹಮ್ಮದ್ ಲಿಯಾಖತ್ ಅಲಿ ರಜ್ವಿ, ಸಿರಾಜ್ ಅಹ್ಮದ್, ಅಬ್ದುಲ್ ಘನಿ ತಾಹೀರ್, ಎ.ಎ. ಖತೀಬ್, ಆರೀಫ್ ಖಾನ್ ಸೇರಿದಂತೆ ಇತರರಿದ್ದರು.

# ಹರಿಹರ : ಆಟೋ ನಿಲ್ದಾಣ ಅಭಿವೃದ್ಧಿ ಕಾಮಗಾರಿಗೆ ರಾಮಪ್ಪ ಚಾಲನೆ



ಹರಿಹರ, ಜೂ.8- ಆಟೋಗಳನ್ನು ನೆರಳಿನಲ್ಲಿ ನಿಲ್ಲಿಸಲು 9 ಲಕ್ಷ ರೂಪಾಯಿ ವೆಚ್ಚದಲ್ಲಿ ನಿಲ್ದಾಣ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಎಸ್. ರಾಮಪ್ಪ ತಿಳಿಸಿದರು.

ನಗರದ ಮಹಾತ್ಮಗಾಂಧಿ ಆಟೋ ನಿಲ್ದಾಣ ಮತ್ತು ಇಂಡಿಯನ್ ಆಟೋ ನಿಲ್ದಾಣದಲ್ಲಿ ಆಟೋಗಳು ನೆರಳಿನಲ್ಲಿ ನಿಲ್ಲುವುದಕ್ಕೆ ಮೇಲ್ಚಾವಣೆ ನಿರ್ಮಾಣದ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಆಟೋಗಳು ಬಿಸಿಲಿನಲ್ಲಿ ನಿಂತು ಬಾಡಿಗೆ ಮಾಡುವುದನ್ನು ಗಮನಿಸಿ, ನಗರಸಭೆ ನಿಧಿಯ 9 ಲಕ್ಷ ರೂಪಾಯಿ ವೆಚ್ಚದಲ್ಲಿ ಮೂರು ಆಟೋ ನಿಲ್ದಾಣಗಳಲ್ಲಿ ಮೇಲ್ಚಾವಣಿ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನುಳಿದ ಆಟೋ ನಿಲ್ದಾಣಗಳನ್ನು ಅಭಿವೃದ್ಧಿ ಮಾಡಲಾಗುವುದು.

ಕಾರು ಸ್ಟ್ಯಾಂಡ್‌ನಲ್ಲಿ ಸ್ವಚ್ಛತೆ ಮಾಡುವುದಕ್ಕೆ ನೀರಿನ ಟ್ಯಾಂಕ್ ನಿರ್ಮಾಣ, ನೆರಳಿನಲ್ಲಿ ನಿಲ್ಲಿಸಲು ಮೇಲ್ಚಾವಣೆ ನಿರ್ಮಾಣಕ್ಕೂ ಸಹ ನೀಲಿ ನಕ್ಷೆ ತಯಾರಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಎಲ್ಲಾ ಬಡಾವಣೆಗಳಲ್ಲಿ ಯುಜಿಡಿ ಮತ್ತು ಜಲಸಿರಿ ಕಾಮಗಾರಿಯಿಂದಾಗಿ ಆಟೋಗಳನ್ನು ಓಡಿಸುವುದು ಕಷ್ಟವಾಗಿದೆ ಎಂದು ಆಟೋ ಚಾಲಕರು ಮನವಿ ಮಾಡಿಕೊಂಡಿದ್ದು, ಯುಜಿಡಿ, ಜಲಸಿರಿ ಅಧಿಕಾರಿಗಳಿಗೆ ನಾನು ಸಹ ಸಾಕಷ್ಟು ಬಾರಿ ತಿಳಿಸಿದರೂ ತಮ್ಮ ಉದ್ದಟತನವನ್ನು ಬಿಡುತ್ತಿಲ್ಲ.

ಹಾಗಾಗಿ ಇದು ಅವರಿಗೆ ಕೊನೆಯದಾಗಿ ಹೇಳುವೆ, ಆದಷ್ಟು ಬೇಗನೆ ದುರಸ್ತಿ ಪಡಿಸಲು, ಅವರ ಜೊತೆಗೆ ಮಾತನಾಡುವಂತೆ ಪೌರಾಯುಕ್ತ ಐ. ಬಸವ ರಾಜ್, ಎಇಇ ಬಿರಾದಾರ್ ಅವರಿಗೆ ಸೂಚಿಸಿದರು.

ಈಗಾಗಲೇ ನಗರಸಭೆಗೆ 8 ಕೋಟಿ ಮತ್ತು 20 ಕೋಟಿ ಅನುದಾನ ಬಿಡುಗಡೆ ಆಗಿದ್ದು, ಆ ಹಣದಿಂದ ನಗರದಲ್ಲಿನ ಬಹುತೇಕ ರಸ್ತೆಗಳು, ಚರಂಡಿಗಳು ದುರಸ್ತಿ ಆಗುತ್ತವೆ ಎಂದು ಹೇಳಿದರು.

ಆಟೋ ಚಾಲಕ ಮತ್ತು ಮಾಲೀಕರ ಸಂಘದ ಗೌರವಾಧ್ಯಕ್ಷ ಸಿದ್ದಲಿಂಗಸ್ವಾಮಿ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್, ಎಇಇ ಬಿರಾದಾರ, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಇಬ್ರಾಹಿಂ, ಮುಜಾಮಿಲ್, ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಮಾಜಿ ಸದಸ್ಯ ಹಂಚಿನ ನಾಗಪ್ಪ, ಕಾಂಗ್ರೆಸ್ ಮುಖಂಡ ದಾದಾಪೀರ್ ಭಾನುವಳ್ಳಿ, ಆಟೋ ಚಾಲಕ ಮತ್ತು ಮಾಲೀಕರ ಸಂಘದ ಅಧ್ಯಕ್ಷ ಮೋಹನ್ ಕುಮಾರ್, ಆಟೋ ಚಾಲಕರಾದ ಕುಮಾರ್, ಹರೀಶ್, ಮಲ್ಲಣ್ಣ, ಬಸವರಾಜ್, ಮೋಹನ್, ಸಂತೋಷ್, ಅರುಣ್, ಪುಟ್ಟಣ್ಣ, ಹನುಮಂತಪ್ಪ, ನವೀನ್, ವರದ, ಮಂಜುನಾಥ್, ಕೇಶವ ಗುತ್ತಿಗೆದಾರ ಗಿರೀಶ್, ನಗರಸಭೆ ಸಿಬ್ಬಂದಿ ದಯಾನಂದ ಹಾಗು ಇತರರು ಹಾಜರಿದ್ದರು.

## ಪಿ.ಜಿ. ಸೀಟುಗಳು ಖಾಲಿ

**(1ನೇ ಪುಟದಿಂದ)** ಇರಲು ಇರುವ ಕಾರಣಗಳ ಬಗ್ಗೆ ಕೇಂದ್ರ ಹಾಗೂ ಎಂ.ಸಿ.ಸಿ.ಗಳು 24 ಗಂಟೆಗಳ ಒಳಗೆ ಉತ್ತರಿಸಬೇಕೆಂದು ನ್ಯಾಯಾಲಯ ತಿಳಿಸಿದೆ. ಅಖಿಲ ಭಾರತ ಕೋಟಾದ ಕೌನ್ಸೆಲಿಂಗ್ ನಂತರ 1,456 ಸೀಟುಗಳು ಉಳಿದಿವೆ. ಇವುಗಳನ್ನು ತುಂಬಲು ಇನ್ನೊಂದು ವಿಶೇಷ ಸುತ್ತಿನ ಕೌನ್ಸೆಲಿಂಗ್ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಹಲವಾರು ಅರ್ಜಿಗಳು ದಾಖಲಾಗಿವೆ.

ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಾಲಯ, ಒಂದೇ ಒಂದು ಸೀಟು ಉಳಿದರೂ ಸಹ ಅದನ್ನು ಭರ್ತಿ ಮಾಡಬೇಕಿದೆ. ಪ್ರತಿ ಸುತ್ತಿನ ಕೌನ್ಸೆಲಿಂಗ್ ನಂತರ ಈ ಸಮಸ್ಯೆ ಮುಂದುವರೆಯುತ್ತಿದೆ. ಈ ಸಮಸ್ಯೆ ಬಗೆಹರಿಸಬಾರದೇಕೆ? ಸೀಟುಗಳನ್ನು ಖಾಲಿ ಉಳಿಸುವುದರಿಂದ ನಮಗೇನು ಸಿಗುತ್ತದೆ? ಇದರಿಂದ ಆಕಾಂಕ್ಷಿಗಳಿಗೆ ಸಮಸ್ಯೆಯಾಗುವುದಷ್ಟೇ ಅಲ್ಲದೇ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಸಿಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

## ಯುಪಿಐ ಅನುಮತಿ

**(1ನೇ ಪುಟದಿಂದ)** ಅನುಮತಿ ನೀಡಲಾಗಿತ್ತು. ಯು.ಪಿ.ಐ. ಪಾವತಿ ಗಳು ಉಚಿತವಾಗಿವೆ. ಕ್ರೆಡಿಟ್ ಕಾರ್ಡ್ ಕಂಪನಿಗಳು ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂ.ಡಿ.ಆರ್.) ಅವಲಂಬಿಸಿವೆ. ಇವು ಬಳಕೆಗಾಗಿ ಶುಲ್ಕ ವಿಧಿಸಲಾಗುತ್ತದೆ.

ಗ್ರಾಹಕರಿಗೆ ಹೆಚ್ಚಿನ ಆಯ್ಕೆ ನೀಡಲು ಕ್ರೆಡಿಟ್ ಕಾರ್ಡುಗಳನ್ನು ಯುಪಿಐ ಜೊತೆ ಜೋಡಣೆ ಮಾಡಲು ಅನುಮತಿ ನೀಡಲಾಗಿದೆ. ಯು.ಪಿ.ಐ. 26 ಕೋಟಿ ವಿಶಿಷ್ಟ ಬಳಕೆದಾರರು ಹಾಗೂ 5 ಕೋಟಿ ವ್ಯಾಪಾರಿಗಳನ್ನು ಒಳಗೊಂಡಿದೆ.

# ಶಾಲಾ ಪಠ್ಯ-ಪುಸ್ತಕ ಪರಿಷ್ಕರಣೆ ವಿವಾದ ಹಳೆ ಪಠ್ಯ-ಪುಸ್ತಕ ಮುಂದುವರೆಸಬೇಕು



ಬೆಂಗಳೂರು, ಜೂ. 8- ಶಾಲಾ ಪಠ್ಯ-ಪುಸ್ತಕ ಪರಿಷ್ಕರಣೆ ವಿಚಾರ ತೀವ್ರ ವಿವಾದಕ್ಕೆ ಒಳಗಾಗಿರುವ ಹಿನ್ನೆಲೆಯಲ್ಲಿ ಹಳೆಯ ಪಠ್ಯ-ಪುಸ್ತಕಗಳನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮುಂದುವರೆಸುವುದು ಸೂಕ್ತ ಎಂದು ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಪರಿಷ್ಕರಣೆಯಾಗಿರುವ ಪಠ್ಯ-ಪುಸ್ತಕಗಳನ್ನು ವಾಪಸ್ಸು ಪಡೆಯಬೇಕು. ಒಂದು ವೇಳೆ ಪಠ್ಯ- ಪುಸ್ತಕ ಪರಿಷ್ಕರಣೆ ಮಾಡಲೇಬೇಕಾದರೆ ರಾಜಕೀಯ ಪಕ್ಷಗಳು, ತಜ್ಞರು, ಸಂಘ-ಸಂಸ್ಥೆಗಳು, ಮಠಾಧೀಶರನ್ನು ಒಳಗೊಂಡ ಸಭೆ ಕರೆಯಬೇಕು. ಆ ಸಭೆಯಲ್ಲಿ ಶಾಲಾ ಪಠ್ಯ-ಪುಸ್ತಕ ಪರಿಷ್ಕರಣೆಯ ರೂಪು ರೇಷೆ ಸಿದ್ಧಪಡಿಸಬೇಕು ಎಂಬ ಸಲಹೆ ಮಾಡಿದರು.

ಯಾರನ್ನೋ ಮೆಚ್ಚಿಸುವ ಉದ್ದೇಶದಿಂದ ಪಠ್ಯ-ಪುಸ್ತಕ ಪರಿಷ್ಕರಣೆ ಮಾಡುವುದಲ್ಲ. ನಾಡಿನ ಜನರಿಗೆ ಉತ್ತರದಾಯಿಯಾಗಿರಬೇಕು. ಮಠಾಧೀಶರು ಅಥವಾ ಮತ್ತೆ ಯಾರನ್ನೋ ಮೆಚ್ಚಿಸುವ ಕೆಲಸವಾಗಬಾರದು ಎಂದು ಹೇಳಿದರು.

ಯಾವುದೇ ಕಾರಣಕ್ಕೂ ಶಿಕ್ಷಣ, ಸಂಸ್ಕೃತಿಯನ್ನು ಹಾಳಾಗಲು ಬಿಡಬಾರದು. ಹಾಗೊಂದು ವೇಳೆ ಆದರೆ, ದೇಶ ಹಾಗೂ ನಾಡಿಗೆ ನಷ್ಟವಾಗಲಿದೆ. ಪಠ್ಯಪುಸ್ತಕ ವಿಚಾರದಲ್ಲಿ ಮೂರು ಪ್ರಮುಖ ರಾಜಕೀಯ ಪಕ್ಷಗಳು ರಾಜಕೀಯ ಹಾಗೂ ಚುನಾವಣಾ ಪ್ರಣಾಳಿಕೆ ರೀತಿಯಲ್ಲಿ ಚರ್ಚೆ ಮಾಡುತ್ತಿರುವುದು ಸರಿಯಲ್ಲ. ಭವಿಷ್ಯದ ದೃಷ್ಟಿಯಿಂದ ಸಮಂಜಸ ಮತ್ತು ಸೂಕ್ತ ಮಾಹಿತಿಯನ್ನು ಮಕ್ಕಳಿಗೆ ನೀಡಬೇಕಾಗಿದೆ ಎಂದರು.

# ಶಿಕ್ಷಣ ಸಚಿವರ ಮನೆಗೆ ನುಗ್ಗಿ ಪ್ರತಿಭಟನೆ

**(1ನೇ ಪುಟದಿಂದ)** ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ಕಡ್ಡಾಯವಾಗಿರುತ್ತದೆಯೋ ಅಲ್ಲಿ ಕಾನೂನು ಅನ್ವಯಿಸುತ್ತದೆ. ನ್ಯಾಯಾಲಯದ ಆದೇಶ ಪಾಲನೆ ಮಾಡಲೇಬೇಕಾಗುತ್ತದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಸೆರೆಯಾದ ಉಗ್ರನ ಬಗ್ಗೆ ಮಾಹಿತಿ ನೀಡಲು ನಿರಾಕರಿಸಿದ ಸಚಿವರು, ದೇಶದ ಭದ್ರತೆಯ ದೃಷ್ಟಿಯಿಂದ ತನಿಖೆಯ ವಿವರ ನೀಡುವುದಿಲ್ಲ. ಜಮ್ಮು-ಕಾಶ್ಮೀರ ಪೊಲೀಸರು ಬಂಧಿತನನ್ನು ಕರೆದೊಯ್ದಿದ್ದಾರೆ. ನಮ್ಮ ಪೊಲೀಸರು ನಿರಂತರ ಸಂಪರ್ಕದಲ್ಲಿದ್ದಾರೆ.

ಉಗ್ರನಿಗೆ ಬೆಂಗಳೂರಿನಲ್ಲಿ ಆಶ್ರಯ ನೀಡಿದವರು ಯಾರು? ಯಾರ ಮನೆಯಲ್ಲಿದ್ದ ಆಸ್ತಿ? ಯಾರ ಬೆಂಬಲ ಇದರ ಹಿಂದೆ ಇದೆ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ನಂತರ ಕೇಂದ್ರ ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಲಾಗುತ್ತದೆ ಎಂದು ಹೇಳಿದರು. ಪರೀಕ್ಷೆಯಲ್ಲಿ ಅಕ್ರಮ ನಡೆಸಿದ ಯಾರನ್ನೂ ಬಿಡುವುದಿಲ್ಲ. ನಮ್ಮ ಇಲಾಖೆಯ ಡಿವೈಎಸ್‌ಪಿಯನ್ನೇ ಬಿಟ್ಟಿಲ್ಲ. ಈ ಬಗ್ಗೆ ಸಮಗ್ರ ತನಿಖೆ ಮಾಡುತ್ತೇವೆ ಎಂದು ಪಿಎಸ್‌ಐ ಪರೀಕ್ಷಾ ಅಕ್ರಮ ತನಿಖೆ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರುಗಳಾದ 1) ಹೆಚ್.ಎಂ. ನಿಜಲಿಂಗಯ್ಯ ಬಿನ್ ಲೇಟ್ ಜಯದೇವಯ್ಯ, ವಯಸ್ಸು 54 ವರ್ಷ, ವ್ಯವಸಾಯ, ವಾಸ: ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. 2) ಹೆಚ್.ಎಂ.ಬಸವರಾಜಯ್ಯ ಬಿನ್ ಲೇಟ್ ಜಯದೇವಯ್ಯ, ವಯಸ್ಸು 50 ವರ್ಷ, ವ್ಯವಸಾಯ, ವಾಸ: ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ವಾಸಿಗಳಾದ ಇವರು ನೀಡುತ್ತಿರುವ ಮಾಹಿತಿಯ ಮೇರೆಗೆ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ.

ನನ್ನ ಕಕ್ಷಿದಾರರು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ಸದರಿ ನನ್ನ ಕಕ್ಷಿದಾರರು ಮಾನ್ಯ ಪ್ರಧಾನ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಕಿರಿಯ ವಿಭಾಗ, ದಾವಣಗೆರೆ ಇಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಓ.ಎಸ್.252/2016ರ ದಾವೆಯನ್ನು ಸಲ್ಲಿಸಿರುತ್ತಾರೆ. ಈ ರೀತಿ ಇರುವಾಗ್ಯೆ ಸದರಿ ಅಲೂರು ಗ್ರಾಮದ ಮೃತ ಶಕುಂತಲಮ್ಮನ ವಾರಸುದಾರರುಗಳಾದ 1) ಕೆ.ಎಂ.ತಿಪ್ಪೇಸ್ವಾಮಿ ಬಿನ್ ಕೆ.ಎಂ. ಗುರುಬಸಯ್ಯ @ ವೀರಯ್ಯಸ್ವಾಮಿ, 54 ವರ್ಷ, ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇನ್ನೊಂದು ವಿಳಾಸ: ಕೇರಾಫ್ ಗಿರಿಜಮ್ಮ ಸರ್ಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ, ಕಾಡಜ್ಜಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. 2) ಕೆ.ಎಂ.ಹುಚ್ಚಯ್ಯಸ್ವಾಮಿ ಬಿನ್ ಕೆ.ಎಂ.ಗುರುಬಸಯ್ಯ @ ವೀರಯ್ಯಸ್ವಾಮಿ, 51 ವರ್ಷ, ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. 3) ವನಜಾಕ್ಷಿ ಕೋಂ ಕೊಟ್ರಯ್ಯ ವಯಸ್ಸು ಸುಮಾರು 55 ವರ್ಷ, ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. 4) ಕೆ.ಎಂ.ಗುರುಬಸಯ್ಯ @ ವೀರಯ್ಯಸ್ವಾಮಿ ಬಿನ್ ವಯಸ್ಸು ಸುಮಾರು 75 ವರ್ಷ, ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಹಾಗೂ 5) ಪುಟ್ಟಮ್ಮನ ಮಗನಾದ ನೀವು ಆವರಗೊಳ್ಳದ ಶಿವನಂದಯ್ಯ ಬಿನ್ ಲೇಟ್ ವೀರಯ್ಯ ವಯಸ್ಸು ಸುಮಾರು 77 ವರ್ಷ, ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಸದರಿಯವರು ಎಲ್ಲರೂ ಸೇರಿಕೊಂಡು ಸದರಿ ಷೆಡ್ಯೂಲ್ ಆಸ್ತಿಗಳನ್ನು ಷೆಡ್ಯೂಲ್ ಆಸ್ತಿಗಳ ಮೇಲೆ ಸಾರ್ವಜನಿಕರು ಯಾವುದೇ ತರಹದ ಮಾರಾಟ, ಕರಾರು, ಭೋಗ್ಯ, ಅಡವು ದಾನಪತ್ರ, ಮೃತ್ಯುಪತ್ರ ಹಾಗೂ ಇತರೆ ದಾಖಲಾತಿಗಳ ಮೇಲೆ ವಗ್ಯೆರೆ ಮಾಡತಕ್ಕದ್ದಲ್ಲ. ಮಾಡಿದ ಪಕ್ಷದಲ್ಲಿ ನನ್ನ ಕಕ್ಷಿದಾರರು ಯಾವುದೇ ವ್ಯವಹಾರಗಳಿಗೆ ಜವಾಬ್ದಾರಾಗಿರುವುದಿಲ್ಲ. ಮುಂದೆ ಆಗು ಹೋಗುವ ಎಲ್ಲಾ ಅನಾಹುತಗಳಿಗೆ ನೀವುಗಳೇ ಹೊಣೆಗಾರರಾಗಿರುತ್ತೀರಿ ತಿಳಿಯಿರಿ. ಆದ್ದರಿಂದ ಸಾರ್ವಜನಿಕರಿಗೆ ಈ ಸಾರ್ವಜನಿಕ ಪ್ರಕಟಣೆ ನೀಡಲಾಗಿದೆ.

ಷೆಡ್ಯೂಲ್: 1) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ.ಸರ್ವೆ ನಂ. 31 ವಿಸ್ತೀರ್ಣ 19 ಎಕರೆ 34 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಹಳ್ಳ, ಪಶ್ಚಿಮಕ್ಕೆ: ಭೀಮಪ್ಪನವರ ಜಮೀನು, ಉತ್ತರಕ್ಕೆ: ಹಳ್ಳ, ದಕ್ಷಿಣಕ್ಕೆ: ನಾಯಕರ ಓಬಪ್ಪ ಮತ್ತು ಕರಿಯಜ್ಜರ ಹನುಮಪ್ಪನ ಜಮೀನು.

2) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ.ಸರ್ವೆ ನಂ. 27 ವಿಸ್ತೀರ್ಣ 05 ಎಕರೆ 00 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ಜವಲಕಟ್ಟೆ, ಪಶ್ಚಿಮಕ್ಕೆ: ಹುಚ್ಚ ಹನುಮಪ್ಪನವರ ಜಮೀನು ಮತ್ತು ಮಾರಮ್ಮನ ಕಟ್ಟೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಪುಟ್ಟಪ್ಪನವರ ಜಮೀನು.

3) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ.ಸರ್ವೆ ನಂ. 98 ಪಿ–1, ವಿಸ್ತೀರ್ಣ 02 ಎಕರೆ 05 ಗುಂಟೆ ಮಠದ ಹೊಲ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ಅರಣ್ಯ, ಪಶ್ಚಿಮಕ್ಕೆ: ಇದೇ ಸರ್ವೆ ನಂ. ಪೈಕಿ ಇರುವ ಜಮೀನು, ಉತ್ತರಕ್ಕೆ: ದೇವಿಕೆರೆ ರುದ್ರಪ್ಪನವರ ಜಮೀನು, ದಕ್ಷಿಣಕ್ಕೆ: ಕರಿಬಸವಯ್ಯನವರ ಜಮೀನು.

4) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ.ಸರ್ವೆ ನಂ.27, ವಿಸ್ತೀರ್ಣ 02 ಎಕರೆ 00 ಗುಂಟೆ ಮಾರಮ್ಮನ ಗುಡಿ ಹೊಲ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಬುಲ್ಲಾವ್ವರ ಹನುಮಂತಪ್ಪ ಇವರ ಜಮೀನು, ಪಶ್ಚಿಮಕ್ಕೆ: ಟ್ಯಾಂಕ್ ಬಂಡ್ ಮತ್ತು ಪುಟ್‌ಪಾತ್, ಉತ್ತರಕ್ಕೆ: ಬುಲ್ಲಾವ್ವರ ಹನುಮಂತಪ್ಪ ಇವರ ಜಮೀನು, ದಕ್ಷಿಣಕ್ಕೆ: ಕೊಟ್ರಯ್ಯನವರ ಜಮೀನು.

5) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ.ಸರ್ವೆ ನಂ. 211, ವಿಸ್ತೀರ್ಣ 07 ಎಕರೆ 14 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ದಾರಿ, ಪಶ್ಚಿಮಕ್ಕೆ: ಸದರಿ ಸರ್ವೆ ನಂ ಜಮೀನು, ಉತ್ತರಕ್ಕೆ: ಗುರುಸಿದ್ದಪ್ಪನವರ ಜಮೀನು, ದಕ್ಷಿಣಕ್ಕೆ: ಕರಿಮಜ್ಜನವರ ಹನುಮಂತಪ್ಪನವರ ಜಮೀನು.

**ಜಿ.ಎಂ. ಅನಂತ ಜ್ಯೋತಿ ವಕೀಲರು,**
**# 32,15 ನೇ ಕ್ರಾಸ್ ಅಶೋಕ ನಗರ ಕೊಂಡಜ್ಜಿ ರಸ್ತೆ, ದಾವಣಗೆರೆ.**
**ಮೊ: 79755–61595, 99862–58738.**


# ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ: ಸತ್ಯಾಸತ್ಯತೆ ಪರಿಶೀಲಿಸಿ

**(1ನೇ ಪುಟದಿಂದ)** ಹಾಸ್ಟೆಲ್‌ಗಳ ಸಂಖ್ಯೆ ಹೆಚ್ಚಿದ್ದು ವಿದ್ಯಾರ್ಥಿಗಳಿಗೆ ಕಾಲೇಜಿಗೆ ತೆರಳಲು ಸಂಚಾರಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಕಲ್ಪಿಸಬೇಕೆಂದರು. ಜಿಲ್ಲಾಧಿಕಾರಿ ಸಭೆಯಲ್ಲಿ ಹಾಜರಿದ್ದ ಕೆಎಸ್‌ಆರ್‌ಟಿಸಿ ವಿಭಾಗಾಧಿಕಾರಿಗೆ ಜೆ.ಹೆಚ್ ಪಟೇಲ್ ಬಡಾವಣೆಯ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಬಸ್ ಸಂಚಾರ ಕಲ್ಪಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.


ನಾಮನಿರ್ದೇಶಿತ ಸದಸ್ಯ ಆವರಗೆರೆ ವಾಸು ಮಾತನಾಡಿ, ಆನೆಕೊಂಡದ ಬಳಿ ಇರುವ ಮಟ್ಟಿಕಲ್ಲು ನಗರ ಪ್ರದೇಶದಲ್ಲಿ ಎಸ್ಸಿ - ಎಸ್ಟಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿಯ ಜನರಿಗೆ ಸೂಕ್ತ ಮೂಲಭೂತ ಸೌಕರ್ಯಗಳಿಲ್ಲ ಮತ್ತು ಶೌಚಾಲಯ ವ್ಯವಸ್ಥೆ ಇಲ್ಲ ದಾವಣಗೆರೆ ಮಹಾನಗರ ಪಾಲಿಕೆಯ ಅವರು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಪ್ರತಿಯೊಂದು ಕುಟುಂಬಗಳಿಗೆ ಶೌಚಾಲಯ ನಿರ್ಮಾಣ ಮಾಡಿಕೊಡಬೇಕೆಂದರು.

ನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ.ಮುದಜ್ಜಿ ಪ್ರತಿಕ್ರಿಯಿಸಿ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಶೌಚಾಲಯ ಹಾಗೂ ಇನ್ನಿತರೆ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ ಭರವಸೆ ನೀಡಿದರು.

ಜಿ.ಪಂ ಸಿಇಒ ಡಾ.ಎ.ಚನ್ನಪ್ಪ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಕೌಸರ್ ರೇಷ್ಮಾ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜಾನಾಯ್ಕ ಸೇರಿದಂತೆ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರು, ಪದಾಧಿಕಾರಿಗಳು ಹಾಜರಿದ್ದರು.


## ಹಾರ್ದಿಕ ಶುಭಾಶಯಗಳು

**ಶ್ರೀ ಎಸ್.ಎಲ್. ಆನಂದಪ್ಪ**
ಭಾ.ಜ.ಪ. ಹಿಂದುಳಿದ ವರ್ಗಗಳ ದಾವಣಗೆರೆ ಜಿಲ್ಲಾ ಕೋಶಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಅವರಿಗೆ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು.



ಶುಭ ಕೋರುವವರು :
✧ **ಗಣೇಶ ಕರೂರು,** ದಾವಣಗೆರೆ ಜಿಲ್ಲಾ ಆಸ್ಪತ್ರೆ ಸದಸ್ಯರು
✧ **ನಿಂಗಣ್ಣ ಜೆ.ಎನ್.** ✧ **ಆರ್. ಪ್ರತಾಪ್** ✧ **ಅಕ್ಕಿ ರಾಮಚಂದ್ರ**
✧ **ಗುಡ್ಡಪ್ಪ** ✧ **ಮಂಜು ಗಾಂಧಿನಗರ** ✧ **ರವೀಂದ್ರ** ✧ **ಕರಿಬಸಪ್ಪ (ಪಾಂಡು)**
**ಹಾಗೂ ✧ ಎಸ್.ಎಲ್. ಆನಂದಪ್ಪ ಅಭಿಮಾನಿ ಬಳಗ**

# ಇಂದು - ನಾಳೆ ದೊಡ್ಡಬೂದಿಹಾಳ್ ಚೌಡೇಶ್ವರಿ ದೇವಸ್ಥಾನದ ಉದ್ಘಾಟನೆ



ದಾವಣಗೆರೆ ತಾಲ್ಲೂಕು ದೊಡ್ಡಬೂದಿಹಾಳ್ ಗ್ರಾಮದ ಗ್ರಾಮದೇವತೆ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭ ಇಂದು ಮತ್ತು ನಾಳೆ ಜರುಗಲಿದೆ.

ಇಂದು ಬೆಳಿಗ್ಗೆ 8.30 ಕ್ಕೆ ಶ್ರೀ ಚೌಡೇಶ್ವರಿ ದೇವಿಯನ್ನು ಗಂಗಾಪೂಜೆಗೆ ಹರಿಹರಕ್ಕೆ ಹೋಗಿ ಬರುವುದು. ನಂತರ ಸಂಜೆ 6.30 ಕ್ಕೆ ಗಣಪತಿ ಪೂಜೆ, ಪುಣ್ಯಾಹ ವಾಚನ, ಅಂಕುರಾರ್ಪಣೆ, ಋತ್ವಿಕವರುಣ್, ಚೌಡೇಶ್ವರಿಗೆ ಜಲಾದಿ ವಾಸ ಪೂಜೆ, ರಾಕ್ಷೋಘ್ನ ಹೋಮ ನಂತರ ಮಹಾಮಂಗಳಾರತಿ ನಡೆಯಲಿದೆ.

ನಾಳೆ ದಿನಾಂಕ 10 ರ ಶುಕ್ರವಾರ ಬ್ರಾಹ್ಮೀ ಮುಹೂರ್ತದಲ್ಲಿ ದೇವಿ ಪ್ರತಿಷ್ಠಾಪನೆ ಮಹೋತ್ಸವ ನಂತರ ಅಮ್ಮನವರಿಗೆ ಪಂಚಾಮೃತ ಅಭಿ ಷೇಕ, ರುದ್ರಾಭಿಷೇಕ, ಕಳಾಸಾನ್ನಿಧ್ಯ ಹೋಮ, ತತ್ವನ್ಯಾಸ ಹೋಮ, ಕಳಸಾ ರೋಹಣ, ಬ್ರಹ್ಮ ಕಳಸಾಭಿಷೇಕ, ಅಲಂಕಾರ ಸೇವೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಲಿಂಗನಾಯಕನಹಳ್ಳಿ ಶ್ರೀ ಚನ್ನವೀರ ಮಹಾ ಶಿವಯೋಗಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

## ಎಲಿಸಪ್ಪ ತಂಡದಿಂದ ಪರಿಸರ ದಿನ



ದಾವಣಗೆರೆ, ಜೂ.8- ಎಲಿಸಪ್ಪ ಜಾನಪದ ತಂಡದ ವತಿಯಿದ ಇತ್ತೀಚೆಗೆ ಪರಿಸರ ದಿನಾಚರಣೆ ಆಚರಿಸಲಾಯಿತು. ಶ್ರೀಮತಿ ಮೀನಾಕ್ಷಿ ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀಮತಿ ಮಂಗಳ ಮಲ್ಲಿಕಾರ್ಜುನ್, ಶೋಭ ಮಂಜುನಾಥ್, ಗೀತಾ, ಜ್ಯೋತಿ, ಸುಧ, ಸುಮ, ಶೈಲಾ ಹಾಗೂ ಸದಸ್ಯರೆಲ್ಲರು ಉಪಸ್ಥಿತರಿದ್ದರು. ಮಾಗಾನಹಳ್ಳಿ ಮಂಜುನಾಥ್ ಹಾಗೂ ತಿಪ್ಪೇಶ್ ಜಾನಪದ ಕಲಾ ತಂಡದ ಸದಸ್ಯರು ಉಪಸ್ಥಿತರಿದ್ದರು.

## ಅಮೃತ ಕಾಲೇಜಿನಲ್ಲಿ ಪರಿಸರ ದಿನ



ದಾವಣಗೆರೆ, ಜೂ. 8 - ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಗರದ ಅಮೃತ ಪದವಿ ಪೂರ್ವ ಕಾಲೇಜಿನಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು. ಅಮೃತ ವಿದ್ಯಾ ಸಂಸ್ಥೆಯ ಬ್ರಹ್ಮಚಾರಿಣಿ ಆರಾಧನಾಮೃತ ಚೈತನ್ಯ ಅಮ್ಮನವರು, ಕಾಲೇಜಿನ ಪ್ರಾಂಶುಪಾಲ ವಿವೇಕ್, ಕಾಲೇಜಿನ ಆಡಳಿತಾಧಿಕಾರಿ ಕೊಟ್ರೇಶಪ್ಪ, ಭಕ್ತರಾದ ಶಂಕರಪ್ಪ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಚಿಟ್ರಿಕಿ ಶಿವಕುಮಾರ್ ಅವರಿಂದ ವಚನ



ದಾವಣಗೆರೆ, ಜೂ. 8- ಹಾವೇರಿಯ ಮೈಲಾರ ಮಹಾದೇವಪ್ಪ ಸ್ಮಾರಕ ಭವನದಲ್ಲಿ ಕಳೆದ ವಾರ ನಡೆದ ಕರ್ನಾಟಕ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರ ಉತ್ತರಾಧಿಕಾರಿಗಳ ಸಭೆಯಲ್ಲಿ ನಗರದ ಚಿಟ್ರಿಕಿ ಶಿವಕುಮಾರ್ ಅವರು ಶಿವಶರಣೆ ಕಾಳವ್ವ ಅವರ ವಚನ ಹಾಡಿದರು.

## ಇಂದು ದಲಿತ ಚಳವಳಿ ಪುನರುಜ್ಜೀವನ ಜಾಥಾ, 26ಕ್ಕೆ ಸಮಾವೇಶ

ಪ್ರೊ.ಬಿ.ಕೃಷ್ಣಪ್ಪನವರ 85ನೇ ಜನ್ಮ ದಿನ ದಲಿತ ಚಳುವಳಿಯ ಮಹತ್ವದ ದಿನವನ್ನಾಗಿ ಪರಿಗಣಿಸಿ ಅವರ ಚಳುವಳಿಯ ನೆನಪಿಗಾಗಿ ಚಳುವಳಿಯ ಪುನರುಜ್ಜೀವನ ಜಾಥಾ ಹಾಗೂ ಬೃಹತ್ ಸಮಾವೇಶ ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಚಿತ್ರದುರ್ಗ ಸಾಮಾಜಿಕ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ಸಿ.ಕೆ. ಮಹೇಶ್ ತಿಳಿಸಿದ್ದಾರೆ. ಕಾರ್ಯಕ್ರಮದ ಮೊದಲ ಹಂತವಾಗಿ ಪ್ರೊ. ಬಿ. ಕೃಷ್ಣಪ್ಪನವರ ಮೈತ್ರಿವನ (ಸಂಘರ್ಷದ ಭೂಮಿ) ಹರಿಹರದಿಂದ ಚಿತ್ರದುರ್ಗದ ಅಂಬೇಡ್ಕರ್ ಪ್ರತಿಮೆಯ ತನಕ ದಲಿತ ಚಳವಳಿಯ ಪುನರು ಜ್ಜೀವನ ಜಾಗೃತಿ ಜಾಥಾ ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಹೇಳಿದರು.

ಎರಡನೇ ಹಂತದ ಕಾರ್ಯಕ್ರಮವಾಗಿ ಇದೇ ದಿನಾಂಕ 26ರ ಭಾನುವಾರ ಚಿತ್ರದುರ್ಗದ ಅಂಬೇಡ್ಕರ್ ಪ್ರತಿಮೆಯ ಬಳಿ ಬೆಳಿಗ್ಗೆ 11 ಗಂಟೆಗೆ ದಲಿತ ಚಳವಳಿಯ ಪುನರುಜ್ಜೀವನದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.

# ಪಂದ್ಯಾವಳಿಗಳಿಂದ ಪ್ರತಿಭಾನ್ವಿತ ಕ್ರೀಡಾಪಟುಗಳು ಬೆಳಕಿಗೆ ಬರಲು ಸಾಧ್ಯ

## ಎಸ್ಸೆಸ್ ಕಪ್ ಕ್ರಿಕೆಟ್ ಪಂದ್ಯಾವಳಿಯ ಉದ್ಘಾಟನೆಯಲ್ಲಿ ಕ್ರಿಕೆಟ್ ಹಿರಿಯ ತರಬೇತುದಾರ ಎಂ.ಎಲ್. ಪ್ರಕಾಶ್ ಚಾಲನೆ



ದಾವಣಗೆರೆ, ಜೂ.8- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಜನ್ಮ ದಿನದ ಪ್ರಯುಕ್ತ ಕ್ರಿಕೆಟ್ ಪಂದ್ಯಾವಳಿಯಿಂದ ಪ್ರತಿಭಾನ್ವಿತ ಕ್ರೀಡಾಪಟುಗಳ ಪ್ರತಿಭಾ ಪ್ರದರ್ಶನಕ್ಕೆ ಸೂಕ್ತ ವೇದಿಕೆಯ ಜೊತೆಗೆ ಆಟಗಾರರು ಮುಂಚೂಣಿಗೆ ಬರುವಂತೆ ಮಾಡಿದೆ ಎಂದು ಕ್ರಿಕೆಟ್ ನ ಹಿರಿಯ ತರಬೇತುದಾರ ಎಲ್.ಎಂ. ಪ್ರಕಾಶ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಜೆ ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘಗಳ ಸಂಯುಕ್ತಾಶ್ರಯದಲ್ಲಿ ಎಸ್ಸೆಸ್ ಅವರ 92ನೇ ಜನ್ಮದಿನದ ಅಂಗವಾಗಿ 20ನೇ ಬಾರಿಗೆ ಇಂದು ಹಮ್ಮಿಕೊಂಡಿದ್ದ ಎಸ್.ಎಸ್. ಕಪ್ ಕ್ರಿಕೆಟ್ ಪಂದ್ಯಾವಳಿಯನ್ನು ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸ್ತುತ ವರ್ಷಗಳಲ್ಲಿ ಕ್ರಿಕೆಟ್ ಸೇರಿದಂತೆ, ಇನ್ನಿತರೆ ಕ್ರೀಡೆಗಳ ಪಂದ್ಯಾವಳಿಯನ್ನು ಹೆಚ್ಚು ಆಯೋಜನೆ ಮಾಡುವುದು ಕಡಿಮೆಯಾಗಿರುವ ಕಾರಣ ಪ್ರತಿಭಾನ್ವಿತ ಕ್ರೀಡಾಪಟುಗಳು ಸೂಕ್ತ ವೇದಿಕೆ ಸಿಗದಂತಾಗಿ ಕ್ರೀಡೆ ಯಿಂದ ವಿಮುಖರಾಗುವತ್ತ ಹೆಜ್ಜೆ ಇಡುವಂತಾಗಿದೆ ಎಂದು ವಿಷಾದಿಸಿದರು.

**ಜಿಲ್ಲಾ ಕ್ರೀಡಾಂಗಣದ ಬಾಡಿಗೆ ದುಬಾರಿ:** ದಾವಣಗೆರೆಗೆ ಇರುವ ಜಿಲ್ಲಾ ಕ್ರೀಡಾಂಗಣವೊಂದೇ ಗತಿಯಾಗಿದ್ದು, ಕಡಿಮೆ ವಿಸ್ತೀರ್ಣದಲ್ಲೇ ಎಲ್ಲಾ ಕ್ರೀಡೆಗಳು ನಡೆಯಬೇಕಿದೆ. ಇಲ್ಲಿ ಯಾವುದೇ ಅಭಿವೃದ್ಧಿ ಕಂಡಿಲ್ಲ. ಶೌಚಾಲಯ, ಶುದ್ಧ ಕುಡಿಯುವ ನೀರಿನ ಸೌಲಭ್ಯದ ಕೊರತೆಯಿಂದ ಇಲ್ಲಿಗೆ ನಾನಾ ಕ್ರೀಡೆಗಳ ತರಬೇತಿ, ಪಂದ್ಯಾವಳಿಗಳಿಗೆ ಬರುವ ಮಹಿಳಾ ಕ್ರೀಡಾಪಟುಗಳು ಸೇರಿದಂತೆ ಅನೇಕ ಕ್ರೀಡಾಪಟುಗಳು ಸಂಕಷ್ಟ ಅನುಭವಿಸುವಂತಾಗಿದೆ. ಇದಲ್ಲದೇ ಈ ಕ್ರೀಡಾಂಗಣದ ಬಾಡಿಗೆ ಹಣ 700 ರೂ. ಇದ್ದದ್ದು ಇದೀಗ ಏಳೂವರೆ ಸಾವಿರಕ್ಕೇ ದುಪ್ಪಟ್ಟಾಗಿದೆ. ಹೀಗೆ ಕ್ರೀಡೆಗೆ ಪೂರಕ ವಾತಾವರಣ, ಸೌಲಭ್ಯ ಇಲ್ಲವಾದರೆ ಕ್ರೀಡಾಪಟುಗಳು ಕ್ರೀಡೆಗಳಿಂದ ದೂರ ಸರಿಯುತ್ತಾರೆ ಎಂದರು.

ದಾವಣಗೆರೆ, ಹರಿಹರ, ಚಿತ್ರದುರ್ಗ ದಿಂದ ಒಟ್ಟು 24 ಕ್ರಿಕೆಟ್ ಕ್ರೀಡಾಪಟುಗಳ ತಂಡಗಳು ಭಾಗವಹಿಸಿವೆ. ಪಂದ್ಯಾವಳಿಯ ಕೊನೆಯ ಎರಡು ದಿನದಂದು ಪೊಲೀಸರು, ಪತ್ರಕರ್ತರು, ವರ್ತಕರು, ಕೆಇಬಿ, ವೈದ್ಯರು, ವಕೀಲರು ಇವರುಗಳ ಮಧ್ಯೆಯೂ ಅಫಿಷಿಯಲ್ ಟ್ರೋಫಿ ಪಂದ್ಯ ನಡೆಯಲಿದೆ. ಪ್ರತಿದಿನ 12 ಆಟಗಳು ನಡೆಯಲಿದ್ದು, ಇದೇ ದಿನಾಂಕ 12ರ ತನಕ ಒಟ್ಟು 71 ಆಟಗಳು ನಡೆಯಲಿವೆ. ಅಂದು ಭಾನುವಾರ ಸಂಜೆ 5 ಗಂಟೆಗೆ ಪಂದ್ಯಾವಳಿಯ ಸಮಾರೋಪ ನಡೆಯಲಿದೆ.

ಕ್ರೀಡಾಪಟುಗಳ ಸಂಘದ ಶಿವಗಂಗಾ ಶ್ರೀನಿವಾಸ್, ಗುತ್ತಿಗೆದಾರ ರಾಜುರೆಡ್ಡಿ, ಕ್ರೀಡಾಪಟುಗಳ ಸಂಘದ ಕಾರ್ಯದರ್ಶಿ ಕುರುಡಿ ಗಿರೀಶ್, ಜಯಪ್ರಕಾಶ್ ಗೌಡ, ಮಹದೇವ್, ನಟರಾಜ ಬಿಳಿಚೋಡು, ಸುರಭಿ ವಿನಯ್, ಕಾರ್ತಿಕ್, ಕ್ಯಾಂಟೀನ್ ಚಂದ್ರ, ಆರ್. ದಿನೇಶ್, ದಾವಣಗೆರೆ ಇಲೆವೆನ್ಸ್ ತಂಡದ ನಾಯಕ ಹಾಲಪ್ಪ, ಪ್ರಶಾಂತ್, ವಿನಯ್ ಸೇರಿದಂತೆ ಇತರರು ಇದ್ದರು.

# ಬಂಧಿತ ಎನ್‌ಎಸ್‌ಯುಐ ಮುಖಂಡರ ಬಿಡುಗಡೆಗೆ ನಿಖಿಲ್ ಕೊಂಡಜ್ಜಿ ಆಗ್ರಹ

ದಾವಣಗೆರೆ, ಜೂ. 8- ಪಠ್ಯ ಪುಸ್ತಕ ಮರು ಪರಿಷ್ಕರಣೆ ವಿರೋಧಿಸಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ತಿಪಟೂರಿನ ನಿವಾಸದ ಮುಂದೆ ಎನ್‌ಎಸ್‌ಯುಐ ಮುಖಂಡರನ್ನು ಸುಳ್ಳು ಮೊಕದ್ದಮೆ ಹೂಡಿ ಬಂಧಿಸಿರುವುದು ಖಂಡನೀಯ. ಈ ಕೂಡಲೇ ಬಂಧಿತರನ್ನು ಬಿಡುಗಡೆ ಮಾಡುವಂತೆ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಆಗ್ರಹಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆಯಲ್ಲಿ ನಿರತರಾಗಿದ್ದ ವಿದ್ಯಾರ್ಥಿ ಕಾಂಗ್ರೆಸ್ ಮುಖಂಡರು ಸಚಿವರ ಮನೆಗೆ ಬೆಂಕಿ ಹಚ್ಚಲು ಯತ್ನಿಸಿದರು ಎಂಬ ಸುಳ್ಳು ಆರೋಪ ಮಾಡಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿದ್ದಾರೆ. ಇದಲ್ಲದೇ ಸಾಂಕೇತಿಕವಾಗಿ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಾಕಾರರ ವಿರುದ್ಧವೂ ಸಹ ಜಾಮೀನು ರಹಿತ ಪ್ರಕರಣ ದಾಖಲಿಸಲಾಗಿದೆ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ಮಾಡುವ ಹಕ್ಕಿದ್ದರೂ ಸಹ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿರುವುದು ಸರಿಯಲ್ಲ. ಇತಿಹಾಸ ತಿರುಚುವ ಕೆಲಸ ಮಾಡುತ್ತಿರುವ ಬಗ್ಗೆ ಬಿಜೆಪಿಯಲ್ಲಿರುವ ಸಂವಿಧಾನಕ್ಕೆ ಬದ್ಧರಾಗಿರುವವರು, ಬಸವಣ್ಣನವರ ಅನುಯಾಯಿಗಳು ಏಕೆ ಪ್ರಶ್ನಿಸುತ್ತಿಲ್ಲ ಎಂದು ನಿಖಿಲ್ ಕಿಡಿಕಾರಿದರು.

ಯುವ ಕಾಂಗ್ರೆಸ್ ರಾಜ್ಯ ವಕ್ತಾರ ದರ್ಶನ್ ಮಾತನಾಡಿ, ಯುವಕರಿಂದ ಯುವಕರನ್ನು ಜಾಗೃತಗೊಳಿಸಲು, ಜಾತ್ಯತೀತ ಸಿದ್ಧಾಂತದಡಿ ಯುವಜನರನ್ನು ಕಾಂಗ್ರೆಸ್‌ನತ್ತ ಸೆಳೆಯಲು 'ಯಂಗ್ ಇಂಡಿಯಾ ಕೇ ಬೋಲ್' ಎಂಬ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಯುವ ಕಾಂಗ್ರೆಸ್‌ನಿಂದ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಜಿಲ್ಲಾಮಟ್ಟದಲ್ಲಿ ಆಯ್ಕೆಯಾದ ಹತ್ತು ಜನರನ್ನು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟಕ್ಕೆ ಕಳುಸಹಿಸಲಾಗವುದು. ಇಲ್ಲಿ ಆಯ್ಕೆಯಾದ ಇಬ್ಬರನ್ನು ರಾಷ್ಟ್ರೀಯ ವಕ್ತಾರರನ್ನಾಗಿ ಉಳಿದ 8 ಜನರನ್ನು ರಾಜ್ಯ ವಕ್ತರರನ್ನಾಗಿ ನೇಮಕ ಮಾಡಲಾಗುವುದು ಎಂದರು.

18 ರಿಂದ 35 ವರ್ಷದೊಳಗಿನ ಯುವಜನರು ಈ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ವಿಜೇತರಿಗೆ ಪ್ರಥಮ ಐ ಫೋನ್ 13 ಪ್ರೋ ಮೊಬೈಲ್, ದ್ವಿತೀಯ ಐ ಫೋನ್ ಪ್ರೋ ಹಾಗೂ ತೃತೀಯ ಬಹುಮಾನವಾಗಿ ಒನ್ ಪ್ಲಸ್ ಮೊಬೈಲ್ ನೀಡಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರಂಜಿತ್, ನವೀನ್, ಇರ್ಫಾನ್, ಬಾಷಾ, ಹರೀಶ್ ಬಸಾಪುರ, ಚಿರಂಜೀವಿ ಮತ್ತಿತರರು ಉಪಸ್ಥಿತರಿದ್ದರು.

## ನಾಳೆ ಭವಿಷ್ಯ ನಿಧಿ ಅದಾಲತ್

ದಾವಣಗೆರೆ, ಜೂ.8- ನಿಧಿ ಆಪ್ಕೆ ನಿಕಟ್ ಅಥವಾ ಭವಿಷ್ಯ ನಿಧಿ ಅದಾಲತ್ ಅನ್ನು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ಇದೇ ದಿನಾಂಕ 10 ರಂದು ಭವಿಷ್ಯ ನಿಧಿ ಕಚೇರಿ ಶಿವಮೊಗ್ಗದಲ್ಲಿ ನಡೆಸಲಿದ್ದಾರೆ. ಚಂದಾದಾರರು /ಪಿಎಫ್ ಸದಸ್ಯರು/ ಪಿಂಚಣಿದಾರರು ಭೇಟಿ ಮಾಡಬಹುದು. ವಿವರಗಳನ್ನು ನಾಳೆ ದಿನಾಂಕ 8 ರಂದು ಅಥವಾ ಇಮೇಲ್ ಐಡಿ ro.shivamogga@epfindia.gov.in ಗೆ ಕಳುಹಿಸಬಹುದು.

# ಹರಿಹರ: ಕೃಷಿ ಅಭಿಯಾನಕ್ಕೆ ಚಾಲನೆ



ಹರಿಹರ, ಜೂ.8- ಇಲ್ಲಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ ಶಾಸಕ ಎಸ್.ರಾಮಪ್ಪ ಇಂದು ಚಾಲನೆ ನೀಡಿ, ಬೆಳೆ ವಿಮೆ ಕರಪತ್ರಗಳನ್ನು ಬಿಡುಗಡೆ ಮಾಡಿದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಉಪಯುಕ್ತವಾದ ಕೃಷಿ ಮಾಹಿತಿಯನ್ನು ಹೊತ್ತ ವಾಹನ ತಾಲ್ಲೂಕಿನ ಪ್ರತಿ ಗ್ರಾಮದಲ್ಲಿ ಸಂಚರಿಸಿ ರೈತರಿಗೆ ಕೃಷಿ ಮಾಹಿತಿಯನ್ನು ಪ್ರಚಾರ ಮಾಡಲಾಗುತ್ತದೆ. ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು, ಕೃಷಿ, ತೋಟಗಾರಿಕೆ, ಮೀನುಗಾರಿಕೆ ಇಲಾಖೆಗಳಿಂದ ರೈತರಿಗೆ ದೊರೆಯುವ ಸೌಲಭ್ಯಗಳನ್ನು ಈ ಮಾಹಿತಿ ವಾಹನದ ಮೂಲಕ ತಿಳಿಸಲಾಗುವುದು.


ಕೃಷಿ ಇಲಾಖೆಯ ದಾವಣಗೆರೆ ಉಪವಿಭಾಗದ ಉಪ ಕೃಷಿ ನಿರ್ದೇಶಕ ತಿಪ್ಪೇಸ್ವಾಮಿ ಇವರು 2022-23 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವ ಹಾಲಿ ಯೋಜನೆಗಳ ಬಗ್ಗೆ ವಿವರಿಸಿ, ಈ ಕೆಳಕಂಡ ನೂತನ ಯೋಜನೆಗಳ ಬಗ್ಗೆ ವಿವರಿಸಿದರು.

ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಪ್ರತಿ ಎಕರೆಗೆ ರೂ.250/- ರಂತೆ ಗರಿಷ್ಠ 5 ಎಕರೆಗೆ ರೂ.1250/- ಡೀಸೆಲ್ ಸಹಾಯಧನ-ರೈತರ ಖಾತೆಗೆ ನೇರ ಪಾವತಿ. ಡ್ರೋನ್ ಖರೀದಿಸಲು ರೈತ ಉತ್ಪಾದಕ ಕಂಪನಿಗಳಿಗೆ/ಸ್ವ-ಸಹಾಯ ಸಂಘಗಳಿಗೆ/ ಸಂಶೋಧನಾ ಕೇಂದ್ರ/ತರಬೇತಿ ಕೇಂದ್ರಗಳಿಗೆ/ ಕೃಷಿ ಪದವೀಧರರಿಗೆ ಗರಿಷ್ಠ 5.00 ಲಕ್ಷ ಗಳಿಂದ 7.50 ಲಕ್ಷ ರೂಪಾಯಿಗಳವರೆಗೆ ರಿಯಾಯಿತಿ. ಕೃಷಿಯಲ್ಲಿ ಮಹಿಳೆಯರು ಇನ್ನೂ ಹೆಚ್ಚಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಲು ಪ್ರತ್ಯೇಕವಾಗಿ ಮಹಿಳೆಯರಿಗೆ ಕೃಷಿ ಪಂಡಿತ ಪ್ರಶಸ್ತಿ.ಸಾವಯವ ಕೃಷಿಯನ್ನು ಹೊಸ ರೈತರಲ್ಲಿ ಪ್ರೇರೇಪಿಸುವ ಸಲುವಾಗಿ ಪ್ರತಿ ತಾಲ್ಲೂಕಿನಿಂದ ಆಯ್ದ 750 ಫಲಾನುಭವಿಗಳಿಗೆ ತರಬೇತಿ, ಅಧ್ಯಯನ ಪ್ರವಾಸ ಮತ್ತು ಕೃಷಿ ಪರಿಕರಗಳ ಖರೀದಿಗೆ ಸಹಾಯ ಧನ.

ಸ್ಥಳದಲ್ಲೇ ತುರ್ತಾಗಿ ಮಣ್ಣು ಪರೀಕ್ಷೆ, ರಸಗೊಬ್ಬರಗಳ ಪರೀಕ್ಷೆ, ಬೀಜ ಪರೀಕ್ಷೆ ಮುಂತಾದ ತಾಂತ್ರಿಕ ಮಾಹಿತಿ ಒದಗಿಸಲು ಆಯ್ದ ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಸಂಜೀವಿನಿ ವಾಹನಗಳನ್ನು ಬಳಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕ ಎ.ನಾರನಗೌಡ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಶ್ರೀಮತಿ ರೇಖಾ, ಕೃಷಿ ಅಧಿಕಾರಿಗಳಾದ ಮಲ್ಲಿಕಾರ್ಜುನ ಕೆ., ಇನಾಯತ್ ಹೆಚ್.ಆರ್., ಶ್ರೀಮತಿ ಪೂರ್ಣಶ್ರೀ, ಆತ್ಮ ಸಿಬ್ಬಂದಿ, ಮಾಜಿ ನಗರಸಭಾ ಅಧ್ಯಕ್ಷ ಸಿ.ರೇವಣಸಿದ್ದಪ್ಪ, ಮಾಜಿ ನಗರಸಭಾ ಸದಸ್ಯ ಅಂಚಿನ ನಾಗಪ್ಪ, ಕೃಷಿ ಇಲಾಖೆ ಸಿಬ್ಬಂದಿ ಮತ್ತು ರೈತರು ಹಾಜರಿದ್ದರು.

## ಹರಿಹರದಲ್ಲಿ ಇಂದು ಪ್ರೊ. ಬಿ.ಕೃಷ್ಣಪ್ಪ ಜಯಂತಿ



ಹರಿಹರ, ಜೂ. 8 - ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಬಣ) ಯಿಂದ ಸಮಿತಿಯ ಸಂಸ್ಥಾಪಕ ಪ್ರೊ.ಬಿ.ಕೃಷ್ಣಪ್ಪನವರ 84ನೇ ಜಯಂತಿಯನ್ನು ನಾಳೆ ದಿನಾಂಕ 9ರ ಗುರುವಾರ ನಗರದಲ್ಲಿ ನಡೆಸಲಾಗುವುದು.

ಸಮಿತಿಯ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಗುರುವಾರ ಬೆಳಿಗ್ಗೆ 11ಕ್ಕೆ ಹೊರವಲಯದ ಮೈತ್ರಿ ವನದ ಪ್ರೊ. ಬಿ.ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಜಯಂತಿ ಆಚರಿಸಲಾಗುವುದು. ಶಾಸಕ ಎಸ್.ರಾಮಪ್ಪ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ , ಮುಖಂಡರಾದ ಎಂ.ನಾಗೇಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಚಂದ್ರಶೇಖರ್ ಪೂಜಾರ್, ಸಮಿತಿಯ ಜಿಲ್ಲಾ ಸಂಚಾಲಕ ಕುಂದವಾಡ ಮಂಜುನಾಥ್, ಡಾ.ನಾಗರಾಜ್ ವಿ.ಟಿ., ಡಾ.ಜಗನ್ನಾಥ್, ಲೇಖಕರಾದ ಜೆ.ಕಲೀಂಬಾಷಾ, ಹುಲಿಕಟ್ಟಿ ಚನ್ನಬಸಪ್ಪ ಹಾಗೂ ಜನಪ್ರತಿನಿಧಿಗಳು ಭಾಗವಹಿಸುವರು.

ಪೂರ್ವಭಾವಿ ಸಭೆಯಲ್ಲಿ ಜಿಗಳಿಯ ಶಶಿಕುಮಾರ್, ಪ್ರದೀಪ್ ಕುಮಾರ್, ಮಲ್ಲನಾಯಕನಹಳ್ಳಿ ಗುಡದಪ್ಪ, ಹರೀಶ್, ರಂಗನಾಥ್, ಮಂಜಪ್ಪ, ಹನುಮಂತಪ್ಪ, ಶಿವರಾಜ್ ಹಾಗೂ ಇತರರಿದ್ದರು.

## ಯುನೈಟೆಡ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ.8- ನಗರದ ತಾಜ್ ಪ್ಯಾಲೇಸ್ ಮ್ಯಾರೇಜ್ ಹಾಲ್‌ನ ಹಿಂದುಗಡೆ ಇರುವ ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಬಿ. ದಾದಾಪೀರ್ ಮಾತನಾಡಿ, ಇಂದಿನ ಅಭಿವೃದ್ಧಿ ಚಟುವಟಿಕೆಗಳಿಂದ ಪರಿಸರ ವಿಧ ವಿಧವಾಗಿ ಮಾಲಿನ್ಯವಾಗುತ್ತಿರುವ ಬಗ್ಗೆ ಕಳಕಳಿ ವ್ಯಕ್ತಪಡಿಸಿದರು.

ಶಾಲೆಯ ಪ್ರಾಂಶುಪಾಲ ಎಂ. ವಾಸೀಂ ಪಾಷಾ ಅವರು ಪರಿಸರ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಹೇಳಿದರು. ಪರಿಸರದ ಒಳಿತಿಗಾಗಿ ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು ಹಾಗೂ ಪರಿಸರ ಜಾಗೃತಿಯ ಬಗ್ಗೆ ವಿದ್ಯಾರ್ಥಿಗಳು ಸಣ್ಣ ಪ್ರಹಸನವನ್ನು ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡಿದ್ದರು.

## ಜೈನ್ ಕಾಲೇಜಿನ ಸಿವಿಲ್ ವಿಭಾಗದಿಂದ ವಿಶ್ವ ಪರಿಸರ ದಿನ



ದಾವಣಗೆರೆ, ಜೂ. 8- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೆ.ಬಿ.ಕೊಟ್ರೇಶ್ (ನಿವೃತ್ತ ಜಿಲ್ಲಾ ಪರಿಸರ ಅಧಿಕಾರಿ ಕೆ.ಎಸ್.ಪಿ.ಸಿ.ಬಿ. ದಾವಣಗೆರೆ), ಕಾಲೇಜಿನ ಪ್ರಾಂಶುಪಾಲ ಡಾ. ಗಣೇಶ್ ಡಿ ಬಿ, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ರಾಹುಲ್ ಪಾಟೀಲ್, ಕಾರ್ಯಕ್ರಮದ ಆಯೋಜಕ ಗುರುಪ್ರಶಾಂತ್ ಎನ್ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಉದ್ಘಾಟಿಸಿದರು. ನೆರೆದ ವಿದ್ಯಾರ್ಥಿಗಳಿಗೆ ಮಾಲಿನ್ಯ ನಿಯಂತ್ರಣ, ಭೂಮಿಯ ಪ್ರಾಮುಖ್ಯತೆ ಮತ್ತು ಸಂರಕ್ಷಣೆಯ ಬಗ್ಗೆ ತಿಳಿಸಿಕೊಡಲಾಯಿತು. ಕಸ ಮುಕ್ತ-ವಿಷಮುಕ್ತ-ಸಸಿಯುಕ್ತ-ಸಶಕ್ತ ಭೂಮಿಯನ್ನಾಗಿ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂಬ ಘೋಷ ವಾಕ್ಯವನ್ನು ತಿಳಿಸಲಾಯಿತು.

# ಕದಳಿ ವೇದಿಕೆಯಿಂದ 136ನೇ ಕದಳಿ ಕಮ್ಮಟ



ದಾವಣಗೆರೆ, ಜೂ. 8- ಕದಳಿ ಮಹಿಳಾ ವೇದಿಕೆಯ ತಾಲ್ಲೂಕು ಘಟಕದ ವತಿಯಿಂದ ಗುರುಶಾಂತಾಶ್ರಮದಲ್ಲಿ136ನೇ ಕದಳಿ ಕಮ್ಮಟದಲ್ಲಿ ಪರಿಸರ ದಿನಾಚರಣೆ, ದತ್ತಿ ಉಪನ್ಯಾಸ ಹಾಗೂ ಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಿಸಲಾಯಿತು.

ಶ್ರೀಮತಿ ವಿನೋದ ಅಜಗಣ್ಣನವರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬಿಗರ ಚೌಡಯ್ಯನವರ ಹಾಗೂ ಇತರೆ ಶರಣರ ವಚನಗಳು ತುಂಬಾ ಅರ್ಥಪೂರ್ಣವಾಗಿವೆ. ಪ್ರತಿಯೊಬ್ಬರೂ ಅವುಗಳನ್ನು ಕಲಿತು ಮಕ್ಕಳಿಗೂ ಹೇಳಿ ಕೊಡಬೇಕು ಎಂದರು.

ಶ್ರೀಮತಿ ಕುಸುಮಾ ಲೋಕೇಶ್ ಪರಿಸರ ಕುರಿತು ಸ್ವರಚಿತ ಕವನ ವಾಚನ ಮಾಡಿದರು. ದತ್ತಿ ದಾನಿಗಳಾದ ದಿ. ಫೂಲ್ ಚಂದ್ ಷಾ ಅವರ ಪುತ್ರ ಅಂಬಾಲಾಲ್ ಮಾತನಾಡಿ, ಬಡವರಿಗೆ ಅವರ ಅಂಗಡಿಯಿಂದ ಶ್ರವಣ ಸಾಧನವನ್ನು ಉಚಿತವಾಗಿ ಕೊಡುವುದಾಗಿ ಹೇಳಿದರು.

ಡಾ. ಶಾಂತಾ ಭಟ್ ರವರು 'ಅಂತರಂಗ ಶುದ್ಧಿ ಬಹಿರಂಗ ಶುದ್ಧಿ' ವಿಷಯ ಕುರಿತು ದತ್ತಿ ಉಪನ್ಯಾಸ ನೀಡಿದರು.

ಶ್ರೀಮತಿ ಸೌಮ್ಯ ಸತೀಶ್ ಸ್ವಾಗತಿಸಿದರು. ಶ್ರೀಮತಿ ನಂದಿನಿ ಗಂಗಾಧರ್ ರವರು ದತ್ತಿ, ಉಪನ್ಯಾಸಕರನ್ನು, ದತ್ತಿ ದಾನಿಗಳನ್ನು, ಪರಿಚಯಿಸಿದರು. ಶ್ರೀಮತಿ ಮಮತಾ ನಾಗರಾಜ್ ವಂದಿಸಿ, ಪರಿಸರ ಪೂರಕ ಸಲಹೆಗಳನ್ನು ನೀಡಿದರು. ಶ್ರೀಮತಿ ವಸಂತ ಕೆ.ಆರ್. ನಿರೂಪಿಸಿದರು. ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಶ್ರೀಮತಿ ಪಂಕಜಾ ದಯಾನಂದ್, ಶ್ರೀಮತಿ ನಳಿನ ಅಚ್ಯುತ್ ರ ಭಜನಾ ಮಂಡಳಿಯ ಸದಸ್ಯರು, ಕದಳಿ ವೇದಿಕೆಯ ಪದಾಧಿಕಾರಿಗಳು, ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕುಸ್ತಿಯಲ್ಲಿ ಅಂತರರಾಷ್ಟ್ರೀಯ ಮಟ್ಟಕ್ಕೆ ಕುಂಬಳೂರು ಕೆಂಚಪ್ಪ ಆಯ್ಕೆ



ಮಲೇಬೆನ್ನೂರು, ಜೂ. 8- ಸಮೀಪದ ಕುಂಬಳೂರು ಗ್ರಾಮದ ದಿ.ಕಣ್ಣಾಳ್ ಕೆಂಚಪ್ಪನವರ ಮೊಮ್ಮಗ ಹಾಗೂ ಕಣ್ಣಾಳ್ ಆಂಜನೇಯ ಅವರ ಪುತ್ರ ಕೆಂಚಪ್ಪ ಹೈದರಾಬಾದ್‌ನಲ್ಲಿ ಕಳೆದ ವಾರ ನಡೆದ ರಾಷ್ಟ್ರ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿ, ಅಂತರರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕೆಂಚಪ್ಪ ಅವರನ್ನು ಶಾಸಕ ಎಸ್. ರಾಮಪ್ಪ, ಕುಂಬಳೂರು ಗ್ರಾ ಪಂ ಅಧ್ಯಕ್ಷೆ ಲೀಲಾ ಶಿವಕುಮಾರ್, ಯುವ ಮುಖಂಡ ಮಾಗಾನಹಳ್ಳಿ ವಾಸು, ಮಲೇಬೆನ್ನೂರು ಪುರಸಭೆ ಸದಸ್ಯ ಸಾಬೀರ್ ಅಲಿ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದ್ದಾರೆ

## ಚನ್ನಗಿರಿಗೆ ಇಂದು ಲೋಕಾಯುಕ್ತರು

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಕರ್ನಾಟಕ ಲೋಕಾಯುಕ್ತ ದಾವಣಗೆರೆ ಘಟಕದ ಸಂಯುಕ್ತಾಶ್ರಯದಲ್ಲಿ ಚನ್ನಗಿರಿ ತಾಲ್ಲೂಕಿನ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಚನ್ನಗಿರಿಯ ಪ್ರವಾಸಿ ಮಂದಿರದಲ್ಲಿ ಇಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಹಮ್ಮಿಕೊಳ್ಳಲಾಗಿದೆ.

ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಾಗುವುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್.ಕೌಲಾಪುರೆ ತಿಳಿಸಿದ್ದಾರೆ.

## ಎನ್‌ಎಸ್‌ಯುಐನ ಕಾರ್ಯಕರ್ತರಿಗೆ ಜಾಮೀನು

ತುಮಕೂರು, ಜೂ.8- ಶಿಕ್ಷಣ ಸಚಿವರ ಮನೆಗೆ ಮುತ್ತಿಗೆ ಹಾಕಿ, ಬಂಧನಕ್ಕೊಳಗಾಗಿದ್ದ ಎನ್‌ಎಸ್‌ಯುಐ ಕಾರ್ಯಕರ್ತರಿಗೆ ಜಿಲ್ಲಾ ಹೆಚ್ಚುವರಿ ನ್ಯಾಯಾಲಯ ಷರತ್ತು ಬದ್ಧ ಜಾಮೀನು ನೀಡಿದೆ.

ಜೂನ್ 1ರಂದು ಸಚಿವರ ಮನೆ ಎದುರು ಪ್ರತಿಭಟನೆ ನಡೆದಿದ್ದು, ನಂತರ 24 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ತಿಪಟೂರಿನ ಹಿರಿಯ ಶ್ರೇಣಿ ನ್ಯಾಯಾಲಯ ಮುಂದೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಕಳೆದ ಕೆಲವು ದಿನಗಳಿಂದ ಜಾಮೀನಿಗಾಗಿ ಬಂಧಿತರ ಪರ ವಕೀಲರು ಅರ್ಜಿ ಸಲ್ಲಿಸಿದ್ದರು. ಶನಿವಾರ ಜಾಮೀನು ತಿರಸ್ಕೃತಗೊಂಡಿದ್ದು, ಸೋಮವಾರ ಮತ್ತೆ ಅರ್ಜಿ ಸಲ್ಲಿಸಿದ್ದರು. ಬುಧವಾರ ಜಾಮೀನು ಮಂಜೂರಾಗಿದೆ.

## ಪಠ್ಯಪುಸ್ತಕದಲ್ಲಿ ಮದಕರಿ ನಾಯಕರ ಇತಿಹಾಸ ಸೇರಿಸಲು ವೀರಣ್ಣ ಒತ್ತಾಯ



ದಾವಣಗೆರೆ, ಜೂ.8 - ಕರ್ನಾಟಕದ ಚರಿತ್ರೆಯಲ್ಲಿ ಮದಕರಿ ನಾಯಕರಿಗೆ ತಮ್ಮದೇ ಆದ ಮಹತ್ವದ ಸ್ಥಾನವಿದೆ. ದೇಶಕ್ಕಾಗಿ, ನಾಡು ನುಡಿಗಾಗಿ ಅವರು ನಿರಂತರವಾಗಿ ಹೋರಾಡಿದ್ದಾರೆ. ಅಂಥವರ ಬಗ್ಗೆ ಮಕ್ಕಳಿಗೆ ತಿಳಿಸದೆ ತಮಗೆ ಬೇಕಾದವರ ಬಗ್ಗೆ ಪಠ್ಯದಲ್ಲಿ ಸೇರಿಸುವುದು ತಪ್ಪು ಎಂದಿರುವ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ, ಬಿಜೆಪಿ ಸರ್ಕಾರಕ್ಕೆ ದಲಿತ ನಾಯಕರು, ಇತಿಹಾಸ ಪುರುಷರು ಬೇಕಿಲ್ಲ ಎಂದು ಕಿಡಿ ಕಾರಿದ್ದಾರೆ.

ಈಗಲಾದರೂ ಸರ್ಕಾರ ಎಚ್ಚೆತ್ತು ಮದಕರಿ ನಾಯಕರ ಚರಿತ್ರೆಯನ್ನು ಪಠ್ಯಪುಸ್ತಕದಲ್ಲಿ ಸೇರಿಸಲಿ ಎಂದು ಒತ್ತಾಯಿಸಿರುವ ವೀರಣ್ಣ, ಸುರಪುರ ವೆಂಕಟಪ್ಪ ನಾಯಕರ ಪಾಠವನ್ನು ಕೈ ಬಿಟ್ಟಿರುವ ಬಗ್ಗೆ ಆಕ್ಷೇಪಿಸಿದ್ದಾರೆ.

## ನಗರದಲ್ಲಿ ಇಂದು ಬೈಸಿಕಲ್ ಜಾಥಾ

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಗರದಲ್ಲಿ ಇಂದು ಬೆಳಿಗ್ಗೆ 6.30 ಕ್ಕೆ ವಿಶ್ವ ಬೈಸಿಕಲ್ ದಿನಾಚರಣೆಯ ಪ್ರಯುಕ್ತ ಬೈಸಿಕಲ್ ಜಾಥಾ ಏರ್ಪಡಿಸಿದೆ. ಜಾಥಾವು ಡಾ|| ಮೋದಿ ವೃತ್ತದಿಂದ ಪ್ರಾರಂಭಗೊಂಡು ಕರ್ನಲ್ ರವೀಂದ್ರನಾಥ ವೃತ್ತ (ಹೊಸ ಗಡಿಯಾರ ಕಂಬ) ದಲ್ಲಿ ಮುಕ್ತಾಯಗೊಳ್ಳಲಿದೆ.

ವಿಶ್ವ ಬೈಸಿಕಲ್ ದಿನಾಚರಣೆಯ ಪ್ರಯುಕ್ತ ಯುವಜನ ಮತ್ತು ಕ್ರೀಡಾ ಇಲಾಖೆ ಹಾಗೂ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ದೇಶದಾದ್ಯಂತ ಬೈಸಿಕಲ್ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಬೈಸಿಕಲ್ ಜಾಥಾ ನಡೆಸಲಾಗುತ್ತಿದೆ ಎಂದು ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ತಿಳಿಸಿದ್ದಾರೆ.

